ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posted at GPO-MBC Bengaluru Post Office 560001,
Posting Day 12th. Registered No. RNP/BGS/2094/2011-13
Licence to post RNI No. KARBIL - 2004/18001

ಸಂಯುಕ್ತ ಸಹಕಾರಿಯ ನಿರ್ದೇಶಕರ ಪರಿಚಯ

ರಾಜಕಾರಣಿ, ಸಾಮಾಜಿಕ ಚಿಂತಕ, ಕ್ರಿಯಾಶೀಲ ಯುವ ಸಹಕಾರಿ - ಶ್ರೀ ಅರುಣ್ ಶಹಾಪೂರ ಎಂಎಲ್‌ಸಿ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಯ ಬಿಜಾಪುರ ಜಿಲ್ಲೆಯ ಪ್ರತಿನಿಧಿ ಯಾಗಿ ವಿಧಾನ ಪರಿಷತ್ ಸದಸ್ಯ ಶ್ರೀಅರುಣ ಶಹಪೂರರವರು ಮೂಲತಃ ಬಿಜಾಪುರ ಜಿಲ್ಲೆಯ ಸಿಂಧಗಿಯಲ್ಲಿ ದಿನಾಂಕ:01/01/1974ರಲ್ಲಿ ಕೃಷಿ ಕುಟುಂಬದಲ್ಲಿ ಜನಿಸಿದರು ಇವರ ತಂದೆ ಶ್ರೀ ರಾಜಶೇಖರ ಶಹಾಪುರವರು ಕೃಷಿಯ ಜೊತೆಗೆ ವ್ಯಾಪಾರೋದ್ಯಮವನ್ನು ನಿರ್ವಹಿಸುತ್ತ್ ಬಂದವರು ಶ್ರೀಯುತರು ಬಿ.ಕಾಂ. (ವಾಣಿಜ್ಯ ಪದವಿ)ಪದವಿಯನ್ನು ಪಡೆದಿದ್ದಾರೆ ವಿದ್ಯಾರ್ಥಿಯಾಗಿರುವಾಗಲೇ ಸಾಮಾಜಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಗೆ ಹೆಚ್ಚು ಒತ್ತುಕೊಟ್ಟು ಬೆಳೆದವರು. ಅಖಿಲ ಭಾರತ ವಿದ್ಯಾರ್ಥಿ ಪರಿಷತ್‌ನ ಸಕ್ರೀಯ ಕಾರ್ಯಕರ್ತರಾಗಿ ವಿದ್ಯಾರ್ಥಿಗಳ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸಿದವರು.

ಈ ಎಲ್ಲ ಹೋರಾಟಗಳ ಫಲವಾಗಿಯೇ ನಾಯಕತ್ವದ ಸ್ವಭಾವವನ್ನು ಬೆಳೆಸಿಕೊಂಡು ನಾರ್ಥ್‌ವೆಸ್ಟ್ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್‌ನ ಸದಸ್ಯರಾಗಿ ಆಯ್ಕೆಯಾಗಿ ಉತ್ತಮ ಶಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸೇವೆ ಸಲ್ಲಿಸಿದ ಇತರೆ ಕ್ಷೇತ್ರಗಳು : ಕರ್ನಾಟಕ ಮಹಿಳಾ ವಿಶ್ವ ವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಧಾರವಾಡ ವಿಶ್ವ ವಿದ್ಯಾಲಯದ ಸೆನೆಟ್ ಮೆಂಬರ್‌ರಾಗಿ ಎರಡುಬಾರಿ ಕಾರ್ಯನಿರ್ವಹಿಸಿದ್ದಾರೆ. ಬೆಳಗಾವಿ ವಿಭಾಗೀಯ 'ಭಯೋತ್ಪಾದನೆ ವಿರೋಧಿ ವಿದ್ಯಾರ್ಥಿ ಜಾಗೃತಿ ಅಭಿಯಾನ'ದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಛೇಂಬರ್ಸ್ ಆಫ್ ಕಾಮರ್ಸ್ ಹುಬ್ಬಳ್ಳಿ ಇದರ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ವಿಎಸ್‌ಎಸ್ ಟ್ರಸ್ಟ್ ಬೆಲಗಾವಿ ವಿಭಾಗ ಇದರ ಬಿಲ್ಡಿಂಗ್ ಕಮಿಟಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಸಿಂಧಗಿಯ ರೆಡ್ ಕ್ರಾಸ್ ಸೋಸೈಟಿ ಹಾಗೂ ರೋಟರಿ ಕ್ಲಬ್ ಸದಸ್ಯರಾಗಿದ್ದಾರೆ.

ಕರ್ನಾಟಕ ರಾಜ್ಯ ಸೆಕೆಂಡರಿ ಶಿಕ್ಷಕರ ಅಸೋಸಿಯೇಷನ್ ಬೆಂಗಳೂರು ಇದರ ಸಂಘಟನಾ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದಾರೆ ಸಹಕಾರ ಕ್ಷೇತ್ರದ ಮೂಲಕ ಸಮಾಜದ ಸಾಮಾನ್ಯ ಜನರಿಗೆ ಸೇವೆ ಮಾಡುವ ಉದ್ದೇಶ ಹೊಂದಿ ಶ್ರೀಯುತರು ಸಿಂಧಗಿಯಲ್ಲಿ ಶ್ರೀ ಗಣೇಶ ವಿವಿದೋದ್ದೇಶ ಸಹಕಾರಿ ನಿ., ಇದನ್ನು ಸ್ಥಾಪನೆ ಮಾಡಿ ಅದರ ಸ್ಥಾಪಕ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಹಕಾರಿ ಕ್ಷೇತ್ರದ ಮೂಲಕ ದೇಶದ ಆರ್ಥಿಕ ಅಭಿವೃದ್ಧಿ ಸಾಧ್ಯವೆಂದು ಅಭಿಪ್ರಾಯಪಡುವ ಶ್ರೀಯುತರು ಸಹಕಾರಿ ತತ್ವಗಳಲ್ಲಿ ನಂಬಿಕೆಇಟ್ಟು ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಿದ್ದಲ್ಲಿ ಸಹಕಾರಿ ಕ್ಷೇತ್ರ ಬಡತನ ಹಾಗೂ ನಿರುದ್ಯೋಗ ನಿವಾರಣೆ ಒಂದು ಉತ್ತಮ ವ್ಯವಸ್ಥೆಯಾಗಬಹುದೆಂದು ಆರ್ಥಿಕ ಅಭಿವೃದ್ಧಿ ಸಾಧಿಸ ಬಹುದು ಎಂದು ಅಭಿಪ್ರಾಯ ಹೊಂದಿದ್ದಾರೆ. ಯುವಕರು ಹಾಗೂ ಮಹಿಳೆಯರು ಹೆಚ್ಚಾಗಿ ಈ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಬೇಕೆಂದು ಅಭಿಪ್ರಾಯ ಪಡುತ್ತಾರೆ.

ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು

ಅಧ್ಯಕ್ಷ	ಶ್ರೀ ಎಸ್. ಆರ್. ಸತೀಶಚಂದ್ರ	9448696108
ಉಪಾಧ್ಯಕ್ಷ	ಶ್ರೀ ಗುರುನಾಥ ಜ್ಯಾಂತೀಕರ	9448270104
ವ್ಯವಸ್ಥಾಪಕ ನಿರ್ದೇಶಕ	ಶ್ರೀ ಶರಣಗೌಡ ಜಿ. ಪಾಟೀಲ	9740401685
ಉಪ ಪ್ರಧಾನ ವ್ಯವಸ್ಥಾಪಕ	ಶ್ರೀ ನಾರಾಯಣ ಹೆಗಡೆ	9480579882
ಉಪ ಪ್ರಧಾನ ವ್ಯವಸ್ಥಾಪಕ	ಶ್ರೀ ವೈ. ಕುಮಾರ	9845893455
ತರಬೇತಿ ಅಧಿಕಾರಿ	ಶ್ರೀ ವಿ.ಜೆ. ಕಾರಕೂನ	9482734077
ಕಾನೂನು ವಿಭಾಗದ ಅಧಿಕಾರಿ	ಶ್ರೀ ಶ್ರೀಕಾಂತ	9916814888
ಬೆಂಗಳೂರು ವಿಭಾಗಾಧಿಕಾರಿ	ಶ್ರೀ ರಘುನಂದನ್ ಕೆ.	9481036592
ಬೆಳಗಾವಿ ವಿಭಾಗಾಧಿಕಾರಿ	ಶ್ರೀ ಜಿ.ಎಸ್. ಟೋಪಣ್ಣನವರ್	9916367887
ಗುಲ್ಬರ್ಗಾ ವಿಭಾಗಾಧಿಕಾರಿ	ಶ್ರೀ ಸಂಜಯ ಕೋರಟಕರ	9900990268
ಮೈಸೂರು ವಿಭಾಗಾಧಿಕಾರಿ	ಶ್ರೀ ಶಿವಕುಮಾರ ಬಿರಾದಾರ	9844454995

ಇವರಿಂದ ಪ್ರಕಟಿತ :

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ, (ವಿವೇಕಾನಂದ ಕಾಲೇಜು ಎದುರು) ಒಂದನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು – 10.
web : www.souharda.coop,
E-mail : souharada@souharada.coop,
ದೂ.ಸಂ : 23378375/76/77/78/79/80 & 23474408, 23573291
ಸಂಪಾದಕ, ಪ್ರಕಾಶಕ : **ಶರಣಗೌಡ ಜಿ. ಪಾಟೀಲ**
ಸಂಚಿಕೆ ಸಿದ್ಧತೆ : **ವಿ.ಜೆ.ಕಾರಕೂನ**
ಮುದ್ರಣ : **ವರ್ಣ ಕಮ್ಯುನಿಕೇಷನ್ಸ್**, ಬೆಂಗಳೂರು.

ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ : ನಂ.436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ–1. ದೂ. 0831–2401551
ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ : ಡಿ.2, 1ನೇ ಮಹಡಿ, ರತಿ ಬಿಲ್ಡಿಂಗ್, ಖೂಬ ಪ್ಲಾಟ್, ಗುಲ್ಬರ್ಗಾ–2
ದೂ : 08472–227022, ಮೊ : 9900990268

ಏಪ್ರಿಲ್ – 2012

ಅಂತರರಾಷ್ಟ್ರೀಯ
ಸಹಕಾರಿ ವರ್ಷ – 2012

ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸಂಪುಟ 10 * ಸಂಚಿಕೆ 04 * ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ * ವಾರ್ಷಿಕ ಚಂದಾ 100/– * ಬೆಲೆ ರೂ. 12/–

ಲೆಕ್ಕಪರಿಶೋಧಕರ ಎಂಪ್ಯಾನಲ್‌ಮೆಂಟ್ ಹಾಗೂ ಪುನರ್‌ಮನನ ಕಾರ್ಯಾಗಾರ

ನಾಡಿನ ಜನತೆಗೆ ರಾಮನವಮಿ, ಮಹಾವೀರ ಜಯಂತಿ, ಗುಡ್ ಫ್ರೈಡೇ, ಡಾ. ಅಂಬೇಡ್ಕರ್ ಜಯಂತಿ,
ಬಸವ ಜಯಂತಿ, ಶಂಕರ ಜಯಂತಿ ಹಾಗೂ ರಾಮಾನುಜಾಚಾರ್ಯರ ಜಯಂತಿ ಶುಭಾಶಯಗಳು

ಪುಟಗಳಲ್ಲಿ...

ಅಧ್ಯಕ್ಷರ ನುಡಿ 2
ಸೌಹಾರ್ದ ಸಹಕಾರಿ ಸಮಾಚಾರಗಳು....................4,5,6,7,8,9
ರಾಜ್ಯ ಬಜೆಟ್, ಸಕಾಲ....................3
ಸಂಯುಕ್ತ ಸಹಕಾರಿ ಸಮಾಚಾರಗಳು....................10,11
ಲೇಖನ....................12,13,14,15,16,17
ಅನಿಸಿಕೆಗಳು....................18
ಸುದ್ದಿ, ಷೇರು ಚೂರು–ಪಾರು....................19
ಸಹಕಾರಿ ನಿರ್ದೇಶಕರ ಪರಿಚಯ....................20

ಸೌಹಾರ್ದ ಸಹಕಾರಿಗಳ ಸಂಖ್ಯೆ : 1993 - 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ - 448

ಸಹಕಾರಿ ಸಂಸ್ಥೆಗಳಲ್ಲಿ ಚಿನ್ನಾಭರಣಗಳ ಸಾಲ ಹೆಚ್ಚಿಸುವುದು ಅಗತ್ಯ

ನೂತನ ಆರ್ಥಿಕ ವರ್ಷದ ಶುಭಾಶಯಗಳು

ಸಹಕಾರಿ ಸಂಸ್ಥೆಗಳು ಬಡವರ ಕಲ್ಪವೃಕ್ಷ, ಕಾಮಧೇನು ಎಂಬುದು ಅನೇಕ ಸಹಕಾರಿ ಗಣ್ಯರ ಅಭಿಪ್ರಾಯವಾಗಿದೆ. ಸಹಕಾರಿ ತತ್ವಗಳ ನಿಜ ಅರ್ಥದಲ್ಲೂ ಇದು ಸರಿ. ಬಡವರ ಆರ್ಥಿಕ ಅಭಿವೃದ್ಧಿಯೆ ಸಹಕಾರಿ ಕ್ಷೇತ್ರದ ಗುರಿ. ಈ ನಿಟ್ಟಿನಲ್ಲಿ ದೇಶದ ಸಹಕಾರಿ ಕ್ಷೇತ್ರದ ಒಂದು ಶತಮಾನದ ಸಾಧನೆ ಗಮನಾರ್ಹವಾಗಿದೆ. ಆದಾಗ್ಯೂ ದೇಶದಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ ಚಿನ್ನದ ವ್ಯವಹಾರ ಮಾಡುವ ಹಣಕಾಸು ಕಂಪನಿಗಳು ಬೃಹದಾಕಾರವಾಗಿ ಬೆಳೆಯುತ್ತಿರುವುದು ಸಹಕಾರಿ ಕ್ಷೇತ್ರ ಈ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿಲ್ಲವೆನ್ನೂ, ಇದರಿಂದಾಗಿ ಬಡವರ ಶೋಷಣೆ ಹೆಚ್ಚಾಗುತ್ತಿದೆಯೆನೂ ಎಂಬ ವಿಚಾರಗಳಿಗೆ ಪುಷ್ಠಿ ಕೊಡುತ್ತದೆ. ಸಹಕಾರಿಗಳು ಈ ಬಗ್ಗೆ ಚಿಂತನೆ ಮಾಡಬೇಕಾದ ಸಮಯ ಎಂಬುದು ನನ್ನ ಭಾವನೆ.

ಈ ದೇಶಕ್ಕೆ ಸ್ವಾತಂತ್ರ ಬಂದಾಗ ಮಹಾತ್ಮಾ ಗಾಂಧೀಜಿಯವರು ಈ ದೇಶಕ್ಕೆ ರಾಜಕೀಯ ಸ್ವಾತಂತ್ರ ಬಂದಿದೆ ಆದರೆ ಆರ್ಥಿಕ ಸ್ವಾತಂತ್ರ ಬರಬೇಕು ಹಾಗಾದರೆ ಮಾತ್ರ ನಮಗೆ ನಿಜವಾದ ಸ್ವಾತಂತ್ರ ಬಂದಂತೆ. "ಆರ್ಥಿಕ ಸ್ವಾತಂತ್ರಕ್ಕೆ ಸಹಕಾರವೇ ಹೆಬ್ಬಾಗಿಲು" ಈ ಕ್ಷೇತ್ರವನ್ನು ಬಲಪಡಿಸುವುದು ಅಗತ್ಯ ಎಂದು ಹೇಳಿದ ಮಾತುಗಳನ್ನು ಅಕ್ಷರಶಃ ಪಾಲಿಸುವ ಬದ್ಧತೆಯನ್ನು ಸಹಕಾರಿಗಳಾದ ನಾವು ಬೆಳೆಸಿಕೊಳ್ಳಬೇಕಾಗಿದೆ. ಹಸಿರು ಕ್ರಾಂತಿಯ ಮೂಲಕ ವ್ಯವಸಾಯ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿಗಳಾಗಿದ್ದೆವೆ. ಅದೇ ರೀತಿ ಹಾಲಿನ ಕ್ಷೇತ್ರದಲ್ಲಿ ಶ್ವೇತಕ್ರಾಂತಿಯನ್ನು ಮಾಡಿರುವುದರ ಜೊತೆಗೆ ಪ್ರಪಂಚದ ಗಮನವನ್ನ ಸೆಳೆದಿದ್ದೇವೆ. ಅದೇ ರೀತಿ ಜೀವನದ ಎಲ್ಲ ಕ್ಷೇತ್ರಗಳನ್ನೂ ಸಹಕಾರಿ ಕ್ಷೇತ್ರ ಆವರಿಸಿದೆಯಾದರೂ ಈ ದೇಶದಲ್ಲಿ ಬಡವರ ಶೋಷಣೆಗೆ ನಿಂತಿಲ್ಲ.

ಈ ದೇಶದಲ್ಲಿ ಮಧ್ಯಮ, ಕೆಳಮಧ್ಯಮ ಹಾಗೂ ಬಡವರು ಚಿನ್ನವನ್ನು ತಮ್ಮ ಆರ್ಥಿಕ ಸಂಕಷ್ಟಕ್ಕೆ ಬಳಸುವುದು ಸಾಮಾನ್ಯ ವಿಷಯ. ಇಂತಹ ಸಂದರ್ಭಗಳಲ್ಲಿ ಮಾರವಾಡಿ ಅಂಗಡಿಗಳಲ್ಲಿ ಅಡುವು ಇಟ್ಟು ಒಂದಕ್ಕೆ ಎರಡು ಬಡ್ಡಿಕೊಟ್ಟು ತೊಂದರೆ ಅನುಭವಿಸುತ್ತಿರುವುದು ಸಾಮಾನ್ಯ. ಈಗ ಮಾರವಾಡಿಗಳ ಜೊತೆಗೆ ಕೆಲವು ಬಂಗಾರದ ಸಾಲ ನೀಡುವ ಕಂಪನಿಗಳು ಹುಟ್ಟಿಕೊಂಡು ಈ ವರ್ಗದ ಜನರನ್ನು ಶೋಷಣೆಮಾಡುತ್ತಿರುವುದನ್ನು ಕೇಳಿದ್ದೇವೆ ಹಾಗೂ ಕಾಣುತ್ತಿದ್ದೇವೆ. ಬಂಗಾರದ ಸಾಲ ನೀಡುವ ಕಂಪನಿಗಳು ನೀಡುವ ಜಾಹೀರಾತುಗಳು, ಅವರ ವ್ಯಾಪಾರ ಅಭಿವೃದ್ಧಿಗಾಗಿ ಅನುಸರಿಸುತ್ತಿರುವ ಮಾರ್ಗಗಳನ್ನು ಅವರ ಬೆಳವಣಿಗೆಯ ವೇಗವನ್ನು ಗಮನಿಸಿದಾಗ ಇದರಂತೆ ಈ ವರ್ಗದ ಜನರನ್ನು ಅವರು ಶೋಷಣೆ ಮಾಡುವ ಪ್ರಮಾಣ ಹೆಚ್ಚಾಗಿರಬಹುದೆಂದು ಯೋಚಿಸಿ ಭಯವೆನಿಸುತ್ತದೆ.

ಈ ಶೋಷಣೆಯ ನಿವಾರಣೆ ಸಹಕಾರ ಕ್ಷೇತ್ರದಿಂದ ಸಾಧ್ಯವಿಲ್ಲವೆ? ಸಹಕಾರಿ ಸಂಸ್ಥೆಗಳು ಚಿನ್ನಾಭರಣ ಸಾಲದ ವ್ಯವಹಾರವನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಿಲ್ಲವೆ? ಎಲ್ಲವೂ ಸಾಧ್ಯ ಎಂಬುದು ಸಹಕಾರಿ ತಜ್ಞರ ಹಾಗೂ ಅನುಭವಿಗಳ ಅಭಿಪ್ರಾಯ. ಈ ಕಾರ್ಯವನ್ನು ನಿರ್ವಹಿಸ ಬಲ್ಲ ಕ್ರೆಡಿಟ್ ಸಹಕಾರ ಸಂಸ್ಥೆಗಳು ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದಲ್ಲಿ ಈ ಸಮಸ್ಯೆಗೆ ಪರಿಹಾರವಿದೆ. ಪಟ್ಟಣ ಸಹಕಾರ ಬ್ಯಾಂಕುಗಳು ಹಾಗೂ ಕೆಲವು ಕ್ರೆಡಿಟ್ ಸಹಕಾರ ಸಂಸ್ಥೆಗಳು ಈ ಕಾರ್ಯವನ್ನು ಮಾಡುತ್ತಿವೆಯಾದರೂ ಈ ವ್ಯವಹಾರ ಪೂರ್ಣ ಪ್ರಮಾಣದಲ್ಲಿರುವುದಿಲ್ಲ. ಸಾಂಪ್ರದಾಯಿಕತೆಗೆ ಕಟ್ಟುಬಿದ್ದು ಹೆಸರಿಗೆ ಮಾತ್ರ ವ್ಯವಹಾರ ಮಾಡುತ್ತಿರುವುದು, ಸಹಕಾರಿ ಸಂಸ್ಥೆಗಳು "ವಿಶ್ವಾಸಾರ್ಹತೆ"ಯನ್ನು ಹೆಚ್ಚಿಸಿಕೊಳ್ಳದಿರುವುದು, ಸಹಕಾರಿ ಸಂಸ್ಥೆಗಳಲ್ಲಿ ವ್ಯವಹಾರಗಳ ಬಗ್ಗೆ ಪಾರದರ್ಶಕತೆಯ ಕೊರತೆ, ಸದಸ್ಯರ ಕಡಿಮೆ ತಿಳುವಳಿಕೆ ಪ್ರಮಾಣ ಸಹ ಇದಕ್ಕೆ ಕಾರಣವೆಂದು ಅಭಿಪ್ರಾಯವಾಗಿದೆ.

ಈ ಎಲ್ಲ ಕೊರತೆಗಳಿಂದ ಹೊರಬಂದು ಸಹಕಾರಿ ಸಂಸ್ಥೆಗಳು ಚಿನ್ನಾಭರಣ ಸಾಲ ವ್ಯವಹಾರವನ್ನು ಹೆಚ್ಚಿಸಿ ಸಾರ್ವಜನಿಕರಿಗೆ ವಿಶೇಷವಾಗಿ ಚಿನ್ನಾಭರಣ ಸಾಲ ಅಪೇಕ್ಷಿಸುವವರಿಗೆ ಮೂಲಕ ಆರ್ಥಿಕ ನೆರವನ್ನು ಒದಗಿಸಬಹುದಾಗಿದೆ. ಈ ನಿಟ್ಟಿನಲ್ಲಿ ಸಹಕಾರಿಗಳು ಚಿಂತನೆಮಾಡಬಹುದಲ್ಲವೇ?

ಸಹಕಾರಿ ಸಂಸ್ಥೆಗಳು ಚಿನ್ನಾಭರಣ ಸಾಲದ ವ್ಯವಹಾರವನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಿಲ್ಲವೆ? ಎಲ್ಲವೂ ಸಾಧ್ಯ ಎಂಬುದು ಸಹಕಾರಿ ತಜ್ಞರ ಹಾಗೂ ಅನುಭವಿಗಳ ಅಭಿಪ್ರಾಯ. ಈ ಕಾರ್ಯವನ್ನು ನಿರ್ವಹಿಸ ಬಲ್ಲ ಕ್ರೆಡಿಟ್ ಸಹಕಾರ ಸಂಸ್ಥೆಗಳು ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದಲ್ಲಿ ಈ ಸಮಸ್ಯೆಗೆ ಪರಿಹಾರವಿದೆ.

ಎಸ್.ಆರ್.ಸತೀಶಚಂದ್ರ
ಅಧ್ಯಕ್ಷರು

ಬೆಂಗಳೂರು ಸಾವಿರ ಕೋಟಿ ರೂಪಾಯಿಗಳ ಹಣಕಾಸು ನಗರ

ಬೆಂಗಳೂರು ಎರಡು ದಶಕಗಳ ಹಿಂದಿನವರೆಗೂ ಉದ್ಯಾನ ನಗರಿ ಎಂದು ಹೆಸರಾಗಿತ್ತು. ಒಮ್ಮೆಲೆ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನದ ತೀವ್ರ ಬೆಳವಣಿಗೆ ನಂತರ ಐಟಿ, ಬಿಟಿ ನಗರವೆಂದು ಹೆಸರಾಯ್ತು. ಈಗ ನಮ್ಮ ದೇಶದ ಮೊತ್ತ ಮೊದಲ 'ಹಣಕಾಸು ನಗರ'ವಾಗುವತ್ತ ಹೆಜ್ಜೆ ಹಾಕಿದೆ.

ವಿವಿಧ ಹಣಕಾಸು ಸಂಸ್ಥೆಗಳು, ವಿಮೆ ಕಂಪನಿಗಳು ಹಾಗೂ ವಾಣಿಜ್ಯ ಬ್ಯಾಂಕುಗಳು ಒಂದೇ ಕಡೆ ಕಾರ್ಯ ನಿರ್ವಹಿಸುವುದಕ್ಕಾಗಿ ಭಾರತೀಯ ಕೈಗಾರಿಕಾ ಹಣಕಾಸು ನಿಗಮ (ಐಎಫ್‌ಸಿಐ) ಈ ಯೋಜನೆಯನ್ನು ರೂಪಿಸಿದೆ. ದೇವನಹಳ್ಳಿ ಅಂತರರಾಷ್ಟ್ರೀಯ

ವಿಮಾನ ನಿಲ್ದಾಣದ ಸಮೀಪ ಇದಕ್ಕಾಗಿ ರಾಜ್ಯ ಸರ್ಕಾರ ಮಂಜೂರು ಮಾಡಿರುವ ಐವತ್ತು ಎಕರೆ ಭೂಮಿಯಲ್ಲಿ ಈ ಯೋಜನೆ ಅನುಷ್ಠಾನಗೊಳ್ಳಲಿದೆ. ವಿವಿಧ ವಿಮೆ ಕಂಪೆನಿಗಳು, ವಾಣಿಜ್ಯ ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳು ಸುಮಾರು ರೂ. 1000 ಕೋಟಿ ರೂಗಳನ್ನು ಹೂಡಲಿದ್ದು ಮೂರು ವರ್ಷಗಳಲ್ಲಿ ಈ ಯೋಜನೆ ಪೂರ್ಣಗೊಳ್ಳಲಿದೆ. ಕೇಂದ್ರ ಹಣಕಾಸು ಸಚಿವ ಶ್ರೀ ಪ್ರಣವ್ ಮುಖರ್ಜಿ ಈ ಯೋಜನೆಯ ಶಂಕುಸ್ಥಾಪನೆ ಮಾಡಿ "ಬೆಂಗಳೂರು ಆರ್ಥಿಕ ಕ್ಷೇತ್ರದಲ್ಲಿ ಮುಂಬೈ, ದೆಹಲಿ ನಂತರದ ಮೂರನೇ ಸ್ಥಾನದಲ್ಲಿದೆ. ಈ ಯೋಜನೆಯ ಅನುಷ್ಠಾನ ದಿಂದ ಬೆಂಗಳೂರು ಆ ಮೂಲಕ ಕರ್ನಾಟಕ ರಾಜ್ಯ ಆರ್ಥಿಕ ಕ್ಷೇತ್ರದಲ್ಲಿ ಇನ್ನೂ ಅಗ್ರಸ್ಥಾನ ಗಳಿಸಲಿದೆ. ಇದರಿಂದಾಗಿ ರಾಜ್ಯದ ಸಾವಿರಾರು ಜನರಿಗೆ ಉದ್ಯೋಗಾವಕಾಶಗಳು ದೊರಕಲಿದೆ" ಎಂದಿದ್ದಾರೆ, ಅವರ ಮಾತು ಸಾಕಾರಗೊಳ್ಳಲಿ.

ನೂರಾರು ಪುಟದ ಬಜೆಟ್; ನಾಲ್ಕಾರು ಸಾಲಿನಲ್ಲಿ ಸಹಕಾರ

ಮುಖ್ಯಮಂತ್ರಿ ಸದಾನಂದಗೌಡರ ಬಜೆಟ್‌ನಲ್ಲಿ ಸಹಕಾರ ನಾಲ್ಕಾರು ಸಾಲಿನಲ್ಲಿ ಕಾಣಿಸಿಕೊಂಡಿದೆ. ರೈತರು ಸಹಕಾರ ಸಂಸ್ಥೆಗಳ ಮೂಲಕ ಪಡೆಯುವ ರೂ.1ಲಕ್ಷವರೆಗಿನ ಅಲ್ಪಾವಧಿ ಬೆಳೆ ಸಾಲದ ಮೇಲಿನ ಬಡ್ಡಿದರವನ್ನು ಸೊನ್ನೆಗೆ ಇಳಿಸಲಾಗಿದೆ.

ರೈತರು ವಾಣಿಜ್ಯ ಬ್ಯಾಂಕುಗಳಿಂದ ಪಡೆಯುವ ರೂ. 1 ಲಕ್ಷವರೆಗಿನ ಬೆಳೆ ಸಾಲಕ್ಕೆ ಶೇ.3ರ ಬಡ್ಡಿದರ ಸೀಮಿತಿಗೊಳಿಸಲಾಗಿದೆ. ಉಡುಪಿ ಜಿಲ್ಲೆಯಲ್ಲಿ ಒಂದು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಆರಂಬಿಸುವುದು. ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳ ಸಹಕಾರಿ ಬ್ಯಾಂಕ್‌ಗಳನ್ನು ಪುನಶ್ಚೇತನಗೊಳಿಸುವುದು. ಸ್ವಸಹಾಯ ಗುಂಪುಗಳಿಗೆ ಶೇ.4ರ ಬಡ್ಡಿ ದರದಲ್ಲಿ ಸುಮಾರು ರೂ.750 ಕೋಟಿ ನೀಡಿಕೆ. ಯಶಸ್ವಿನಿ ರೈತರ – ಸಹಕಾರಿಗಳ ಆರೋಗ್ಯ ರಕ್ಷಾ ಯೋಜನೆಗೆ ರೂ.60 ಕೋಟಿ ನೀಡಿಕೆ ಇತ್ಯಾದಿ.

ಷೇರುಪೇಟೆ ಸೆನ್ಸೆಕ್ಸ್

ಕಳೆದ ತಿಂಗಳು ಇದೇ ವೇಳೆಗೆ ಚೇತರಿಕೆ ಕಂಡ ಷೇರುಪೇಟೆ 17636ಅಂಕಗಳಲ್ಲಿ ನೆಲೆ ಗೊಂಡಿದ್ದು, ಈ ಆರ್ಥಿಕ ಸಾಲಿನ ಮೊದಲ ದಿನದಂದು ಹೂಡಿಕೆದಾರರು ಖರೀದಿಗೆ ಮುಂದಾದಂತೆ ಮತ್ತೆ ಕೆಳಗಿಳಿದಿದ್ದ ಸೂಚ್ಯಂಕ 74 ಅಂಕಗಳಿಂದ ಜಿಗಿದು 17,478 ಅಂಕ ಗಳಲ್ಲಿ ನೆಲೆಗೊಂಡಿದೆ. ಇದು ಕಳೆದ ತಿಂಗಳಿ ಗಿಂತ 158 ಅಂಕಗಳಷ್ಟು ಕೆಳಗಿದ್ದರೂ ಮುಂದಿನ ದಿನಗಳಲ್ಲಿ ಮೇಲೆರುವ ಸೂಚನೆಗಳಿವೆ.

ಸೆಬಿ ಸ್ಥಳೀಯ ಕಚೇರಿ ಬೆಂಗಳೂರಿನಲ್ಲಿ

ಸೆಕ್ಯೂರಿಟೀಸ್ ಆಂಡ್ ಎಕ್ಸ್‌ಚೆಂಜ್ ಬೋರ್ಡ್ ಆಫ್ ಇಂಡಿಯಾ (ಸೆಬಿ) ದೇಶದ ಹೂಡಿಕೆದಾರರ ಅಗತ್ಯಗಳನ್ನು ಮನಗಂಡು ತನ್ನ ಕಛೇರಿಯನ್ನು ಬೆಂಗಳೂರು ಸೇರಿದಂತೆ ಐದು ಪ್ರಮುಖ ನಗರಗಳಲ್ಲಿ ಸ್ಥಳೀಯ ಶಾಖೆಗಳನ್ನು ಹೊಂದಲಿದೆ. ಇದರಿಂದ ಆಯಾ ಪ್ರದೇಶದ ಹೂಡಿಕೆದಾರರಿಗೆ ಅನುಕೂಲವಾಗಲಿದೆ.

ಡಿ.ಡಿ. ಚೆಕ್, ಪೇ ಆರ್ಡರ್ ಕಾಲಮಿತಿ ಮೂರು ತಿಂಗಳಿಗೆ ಇಳಿಕೆ

ಇದೇ ಏಪ್ರಿಲ್ 1 ರಿಂದ ಭಾರತೀಯ ರಿಸರ್ವ್ ಬ್ಯಾಂಕ್ ಚೆಕ್ ಮತ್ತು ಡಿಮ್ಯಾಂಡ್ ಡ್ರಾಫ್ಟ್‌ಗಳನ್ನು ನಗದುಗೊಳಿಸುವ ಕಾಲಮಿತಿಯನ್ನು 6 ತಿಂಗಳಿಂದ 3 ತಿಂಗಳಿಗೆ ಇಳಿಸಿ ನಿಯಮ ಜಾರಿಗೊಳಿಸಿದೆ. ಚೆಕ್ ಮತ್ತು ಡಿಮ್ಯಾಂಡ್ ಡ್ರಾಫ್ಟ್‌ಗಳ ನಗದುಗೊಳಿಸುವ ಅವಧಿ 6 ತಿಂಗಳಿನದಾಗಿತ್ತು. ಇದರೊಂದಿಗೆ ಪೇ–ಆರ್ಡರ್‌ಗಳ ಕಾಲಮಿತಿಯೂ ಇನ್ನು ಮುಂದೆ 3 ತಿಂಗಳಿಗೆ ಇಳಿಸಲಾಗಿದೆ. ಈ 6 ತಿಂಗಳ ಹಿಂದಿನ ಕಾಲಮಿತಿಯನ್ನು ಅನೇಕರು ದುರುಪ ಯೋಗಿಸಿಕೊಂಡು ವಂಚನೆ ಎಸಗುತ್ತಿದ್ದನ್ನು ಮನಗಂಡು ಕಾಲಮಿತಿಯನ್ನು ಮೂರುತಿಂಗಳಿಗೆ ಇಳಿಸಲಾಗಿದೆ ಎಂದು ಆರ್.ಬಿ.ಐ. ಪ್ರಕಟಣೆ ತಿಳಿಸಿದೆ.

ಚಿನ್ನ ಸುಂಕ ಇಳಿದ ಮೇಲೆ ಚೆನ್ನ

ಕಳೆದ ತಿಂಗಳ 14 ರಂದು ಕೇಂದ್ರ ಬಜೆಟ್‌ನಲ್ಲಿ ಚಿನ್ನದ ಮೇಲೆ ಆಮದು ಸುಂಕವನ್ನು ಶೇ2 ರಿಂದ 4 ಕ್ಕೆ ಏರಿಸಲಾಗಿತ್ತು. ಇದನ್ನು ಅಂದಿನಿಂದಲೇ ದೇಶದ ಚಿನ್ನದ ವ್ಯಾಪಾರಿಗಳು ಪ್ರತಿಭಟಿಸಿ ಮುಷ್ಕರದ ಹಾದಿ ಹಿಡಿದಿದ್ದರು. ಇದರಿಂದಾಗಿ ಸರ್ಕಾರಕ್ಕೆ ರೂ. 700 ಕೋಟಿ ಆದಾಯ ನಷ್ಟ ಉಂಟಾಗಿತ್ತು. ಗ್ರಾಹಕರಿಗೂ ತೊಂದರೆಯಾಗಿತ್ತು. ಈಗ ಕೇಂದ್ರ ಸರ್ಕಾರ ಚಿನ್ನಾಭರಣದ ಮೇಲೆ ವಿಧಿಸಿದ್ದ ಹೆಚ್ಚುವರಿ ಸುಂಕ ಹಿಂಪಡೆದಿದ್ದರಿಂದ ಗ್ರಾಹಕರಿಗೆ, ವ್ಯಾಪಾರಿಗಳಿಗೆ, ಚಿನ್ನಾಭರಣ ತಯಾರಿಸುವ ನೌಕರರಿಗೆ 'ವರಿ' ಇಲ್ಲವಾಗಿದೆ.

ಸ್ವಾಭಿಮಾನಿ ಸಹಕಾರಿಯ ಬಗ್ಗೆ ಅನಿಸಿಕೆ

ನಾನು ಪ್ರಾರಂಭದಿಂದಲೂ ಸ್ವಾಭಿಮಾನಿ ಸಹಕಾರಿ ಪತ್ರಿಕೆಯನ್ನು ಓದುತ್ತಾ ಬಂದಿರುತ್ತೇನೆ. ಕನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತವು ರೂಪಿಸಿ,ಸುಂದರ ನೈಸರ್ಗಿಕ ಪರಿಸರಗಳಲ್ಲಿ ಸಂಘಟಿಸಿರುವ ಸಹಕಾರಿ ಎಂಬುದು ತರಬೇತಿದಾರರ ಅಭಿಪ್ರಾಯ ಸಂಗ್ರಹಗಳಲ್ಲಿ ವ್ಯಕ್ತವಾಗುತ್ತದೆ. ಸ್ವಾಭಿಮಾನಿ ಸಹಕಾರಿ ಪತ್ರಿಕೆಯು ಕಾನೂನು ಪ್ರಶ್ನೋತ್ತರ,ಆಣಬಲಿಯ್-ನಿಬಂಧಕರ ಸುತ್ತೋಲೆಗಳು ತಜ್ಞರುಗಳ ಪ್ರಬುದ್ಧ ಲೇಖನಗಳು, ಷೇರು ಪೇಟೆ ವಿಚಾರ, ಇತ್ಯಾದಿಗಳನ್ನುಒಳಗೊಂಡು ತನ್ನ ಪ್ರೌಢಿಮೆ ಮೆರೆದಿದೆ.

ಸಹಕಾರ ಕ್ಷೇತ್ರದಲ್ಲಿ ಅದಕ್ಕೆಂದೇ ಮೀಸಲಾಗಿರುವ ಪತ್ರಿಕೆಗಳ "ಬರ"ದ ಈ ಕಾಲದಲ್ಲಿ, ಸ್ವಾಭಿಮಾನಿ ಸಹಕಾರಿಯು ಮುಂಬರುವ ದಿನಗಳಲ್ಲಿ ಸಹಕಾರ ಗ್ರಂಥ ವಿಮರ್ಶೆ, ನಗೆ-ಹನಿ, ಚುಟುಕು-ಕವನ, ಯಶೋತಾಥೆಗಳನ್ನು ಒಳಗೊಂಡು ಇನ್ನು ಹೆಚ್ಚು ದಷ್ಟ-ಪುಷ್ಟವಾಗಿ ಹೊರಹೊಮ್ಮಲಿ.

-ಜಿ.ಸಿ. ಹೆಗಡೆ, ನಿವೃತ್ತ ನಿರ್ದೇಶಕರು, ಸಂಶೋಧನೆ ಮತ್ತು ಮೂಲ್ಯಮಾಪನ

ಪತ್ರಿಕೆಯು ಮೊದಲಿಗಿಂತಲೂ ಹೆಚ್ಚಿನ ಪುಟಗಳಲ್ಲಿ ಮುದ್ರಣವಾಗುತ್ತಿದ್ದು ಎಲ್ಲಾ ಸೌಹಾರ್ದ ಸಹಕಾರಿಗಳು ಹಾಗೂ ನಿರ್ದೇಶಕರಿಗೆ ಸೌಹಾರ್ದ ಕಾಯ್ದೆಯ ಬಗ್ಗೆ ತಿಳುವಳಿಕೆ ನೀಡುವ ವಿಷಯವನ್ನು ನೀಡಿ ಹೆಚ್ಚಿನ ಕಾಯಿದೆಯ ಅರಿವು ಹಾಗೂ ಸೌಹಾರ್ದ ಸಹಕಾರಿಗಳ ಬೆಳವಣಿಗೆಗೆ ಸಹಕಾರಿಯಾಗಲು ಅನುಕೂಲವಾಗಿದೆ. ಇದೇ ರೀತಿ ಬ್ಯಾಂಕಿಲ ಕ್ಷೇತ್ರದಲ್ಲಿನ ಇತರೆ ಮಹತ್ವದ ವಿಷಯಗಳನ್ನು ಪ್ರಕಟಿಸಿ

- ಶ್ರೀ ಶಾಂತಿನಾಥ ಅ.ನಾಯಕ, ನಿರ್ದೇಶಕರು, ಆಶೀರ್ವಾದ ಸೌಹಾರ್ದ ಸಹಕಾರಿ ನಿ., ಬೆಳಗಾವಿ

ಪತ್ರಿಕೆ ಸುಂದರವಾಗಿ, ಸ್ಫುಟವಾಗಿ, ಪತ್ರಿಕೆಗೊಂಡು ಮಾಹಿತಿಯನ್ನು ನೀಡುತ್ತಿದ್ದು ಮಾಹಿತಿ ನೀಡುವ ಮೂಲಕ ನಮಗೆಲ್ಲ ರಸದೌತಣ ನೀಡುತ್ತಿದೆ. ಮಾತುಗಳು ಬಹಳ ಉಪಯುಕ್ತವಾಗಿವೆ. ಅವುಗಳನ್ನು ದಿನಾಂಕದಿಂದ ಜೋಡಿಸಿ ಇಟ್ಟುಕೊಂಡಲ್ಲಿ ಮನೆಗೆ ಬಂದ ತಕ್ಷಣ ಪತ್ರಿಕೆ ಓದಿದ ನಂತರವೇ ಉಳಿದ ಕೆಲಸ ಮೂಡುತ್ತೇನೆ.

- ಎಸ್. ಜಿ. ಜೋಶಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರು.

ಪತ್ರಿಕೆ ಮುದ್ರಣ ಮತ್ತು ಸಾಹಿತ್ಯ ಅಂದವಾಗಿದೆ. ಎಲ್ಲಿ ಸಹಕಾರಿಗಳ ಕಾರ್ಯ ಚಟುವಟಿಕೆಗಳ ಪ್ರಕಟಿಸುವುದ ರಿಂದ ಸಹಕಾರಿಗಳಿಗೆ ಪ್ರೋತ್ಸಾಹವಾಗುತ್ತದೆ. ಪ್ರತಿಯೊಬ್ಬ ಸಹಕಾರಿಗಳಿಗೆ ಕಾನೂನು ಮತ್ತು ಇತ್ತೀಚಿನ ವಿದ್ಯಮಾನಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಹೊಸ ಹೊಸ ಸೌಹಾರ್ದ ಸಹಕಾರಿಗಳನ್ನು ಹುಟ್ಟುಹಾಕಲು ಮಾಹಿತಿಯನ್ನು ಪ್ರಕಟಿಸಿದರೆ ಒಳ್ಳೆಯದು

- ಮಂಜುಳಾ ಪಾಟೀಲ್, ನಿದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು

ಪತ್ರಿಕೆ ತುಂಬಾ ಉಪಯುಕ್ತ ವಿಷಯವನ್ನು ಒಳಗೊಂಡಿದ್ದು, ಬಹಳ ಅಂದವಾಗಿ ವಿನ್ಯಾಸಗೊಂಡು ಮುದ್ರಣವಾಗುತ್ತಿದೆ. ಮಾರ್ಚ್ ತಿಂಗಳ ಸಂಚಿಕೆಯಲ್ಲಿ ಶ್ರೀಮತಿ ಮಂಜುಳಾ ಪಾಟೀಲ್‌ರವರ ಲೇಖನ ತುಂಬಾ ವಿಚಾರಪೂರ್ಣವಾಗಿತ್ತು. ಸಹಕಾರ ಕ್ಷೇತ್ರದಲ್ಲಿ ಮಹಿಳೆಯರು ಹೆಚ್ಚಾಗಿ ತೊಡಗಿಕೊಳ್ಳಲು ಅದು ಸ್ಫೂರ್ತಿ ನೀಡಿದೆ. ಇಂತಹ ಲೇಖನಗಳನ್ನು ಹೆಚ್ಚಾಗಿ ಪ್ರಕಟಿಸಿ ಮಹಿಳೆಯರಿಗೆ ಉತ್ತೇಜನ ನೀಡಿ.

- ಸುಮನಾ ಶರಣ್, ವಕೀಲರು, ಮಂಗಳೂರು.

ಸ್ವಾಭಿಮಾನಿ ಸಹಕಾರಿ ಪತ್ರಿಕೆಯು ಅಚ್ಚುಕಟ್ಟಾಗಿ ಮುದ್ರಣವಾಗುತ್ತಿದ್ದು ಸಹಕಾರಿ ಯಲ್ಲಿ ಹೊಸದಾಗಿ ಸೇವೆಯಲ್ಲಿರುವ ಸಿಬ್ಬಂದಿ ಗಳಿಗೆ ಇದರಿಂದ ಅನೇಕ ವಿಷಯಗಳು ತಿಳಿದು ಕೊಳ್ಳಲು ಸಾಧ್ಯವಾಗಿದೆ.

-ಆರ್.ಎಸ್. ಮಗದುಮ್ಮ, ಮುಖ್ಯಕಾರ್ಯನಿರ್ವಹಣಾಧಿಕಾರಿ, ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಧೂಪದಾಲ ಘಟಪ್ರಭ.

ರಾಜ್ಯ ಬಜೆಟ್ ಬೃಹತ್ ಗಾತ್ರ; ಜಾರಿಯಾದರೆ ಅಭಿವೃದ್ಧಿ ಸುಸೂತ್ರ

ಮುಖ್ಯಮಂತ್ರಿ ಶ್ರೀ ಡಿ.ವಿ. ಸದಾನಂದಗೌಡ ತಮ್ಮ ಚೊಚ್ಚಲ 2012–13ರ ಸಾಲಿನ ಬಜೆಟ್ ಮಂಡಿಸಿದ್ದಾರೆ. ಬಟೆಟ್ ಸಿದ್ದಪಡಿಸುವಾಗ –

1. ರಾಜ್ಯದ ಆರ್ಥಿಕ ಸಮೃದ್ಧಿಗಾಗಿ ಅತ್ಯಗತ್ಯವಾದ ಬೆಳವಣಿಗೆ ಪೂರಕವಾದ.
2. ಅಭಿವೃದ್ಧಿ ಫಲ ಸಮಾಜದ ಎಲ್ಲಾ ಹಂತಗಳಿಗೂ ತಲುಪುವಂತ ಯೋಜನೆ.
3. ನಾಗರೀಕರಿಗೆ ಸೇವೆ ಮತ್ತು ಸವಲತ್ತುಗಳು ಉತ್ತಮ ರೀತಿಯಲ್ಲಿ ಹಾಗೂ ಕ್ಷಿಪ್ರವಾಗಿ ದೊರೆಯುವಂತ ಒಳ್ಳೆಯ ಆಡಳಿತ.
4. ಅಭಿವೃದ್ಧಿಗೆ ಪೂರಕವಾದ ರೀತಿಯಲ್ಲಿ ತೆರಿಗೆ ವಿಧಿಸುವುದು.

ಮೇಲಿನ 4 ಅಂಶಗಳು ನನ್ನ ಮನಸ್ಸಿನಲ್ಲಿ ಇರಿಸಿಕೊಂಡಿದ್ದೆ ಎಂದು ಬಜೆಟ್ ಮಂಡನೆ ನಂತರದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

- ಮುಖ್ಯಮಂತ್ರಿಗಳ ಆಶಯದ ಹಿನ್ನೆಲೆಯಲ್ಲಿ ಬಜೆಟ್ ಅನ್ನು ನೋಡುವುದಾದರೆ ಕಳೆದ ಸಾಲಿನ ಬಜೆಟ್ ಗಾತ್ರ ರೂ. 85,319 ಕೋಟಿಯಾದರೆ ಈ ಸಾಲಿಗೆ ಬಜೆಟ್ ಗಾತ್ರ ರೂ.1,02,742 ಲಕ್ಷ ಕೋಟಿ ಮೀರಿದೆ ಅಂದರೆ ಗಾತ್ರದಲ್ಲಿ ಶೇ.20.42 ರಷ್ಟು ಹೆಚ್ಚಳವಾಗಿದೆ.
- ರಾಜ್ಯ ಯೋಜನಾ ಗಾತ್ರ ರೂ. 42,030 ಕೋಟಿ, ಕಳೆದ ಸಾಲಿನ ರೂ. 38,080 ಕೋಟಿಗೆ ಹೋಲಿಸಿದರೆ ಶೇ.10.4 ರಷ್ಟು ಹೆಚ್ಚಳ.
- ವಿತ್ತೀಯ ಕೊರತೆ ಕೇಂದ್ರ ಸರ್ಕಾರ ನಿಗದಿಪಡಿಸಿರುವ ಶೇ.3ರ ಮಿತಿಯೊಳಗೆ ಇದೆ ಅಂದರೆ ಶೇ.2.94 ಇದೆ.
- ರಾಜಸ್ವ ರೂ. 931 ಕೋಟಿ ಮಿಗತೆಯನ್ನು ತೋರಿಸಲಾಗಿದೆ.
- ಕೃಷಿ ಮತ್ತು ಕೃಷಿ ಸಂಬಂಧಿ ಚಟುವಟಿಕೆಗಳಿಗೆ ಒಟ್ಟಾರೆಯಾಗಿ ರೂ. 19,660 ಕೋಟಿ ಹಂಚಿಕೆ ಮಾಡಿರುವು ದರಿಂದ ಕಳೆದ ಸಾಲಿಗಿಂತಲೂ ಶೇ.10.09 ಹೆಚ್ಚಳವಾದಂತಾಗಿದೆ.

ಒಟ್ಟಾರೆಯಾಗಿ ಗಮನಿಸುವುದಾದರೆ ಮುಖ್ಯಮಂತ್ರಿಗಳು ಸಾಕಷ್ಟು 'ನೀರು' ಕುಡಿದು ಬಜೆಟ್ ರೂಪಿಸಿದ್ದಾರೆ ಎನ್ನುವುದು ವೇದ್ಯ. ಈ ಬಜೆಟ್ ಸಿದ್ಧಪಡಿಸುವ ದಿನಗಳಲ್ಲಿ ತಾವು ಎದುರಿಸಿದ ಹಲವು ರಾಜಕೀಯ ಸವಾಲು ಮತ್ತು ಸನ್ನಿವೇಶಗಳನ್ನು ಡಿ.ವಿ.ಜಿ.ಯವರ ಕಗ್ಗದಿಂದ

"ಕಳವಳವ ನೀಗಿ ಬಿಡು, ತಳಮಳವ ದೂರವಿಡು ಕಳೆ ತಳ್ಳು ಗಲಭೆ ಗಾಬರಿಯ ಮನದಿಂದ ಅಲೆದಾಡುತಿರೆ ದೀಪ ಕಣ್ಣಿಗೆ ಗುರಿ ತಪ್ಪುವುದು ತಿಳಿತಿಳಿವು ಶಾಂತಿಯಲಿ – ಮಂಕುತಿಮ್ಮ"

ಎಂಬ ಸಾಲುಗಳನ್ನುಚ್ಚರಿಸುವ ಮೂಲಕ ಹೊರಹಾಕಿದ್ದಾರೆ.

ರಾಜ್ಯದ ಜನತೆಗೆ ಇನ್ನು 'ಸಕಾಲ'

ಆಡಳಿತದಲ್ಲಿ ಪಾರದರ್ಶಕತೆಯನ್ನು ತರುವ ಮತ್ತು ಸರ್ಕಾರಿ ನೌಕರರಲ್ಲಿ ಹೊಸ ವೃತ್ತಿ ಸಂಸ್ಕೃತಿಯನ್ನು ಮೂಡಿಸುವ ಆಶಯ ಹೊಂದಿರುವ, ಎಲ್ಲಕ್ಕಿಂತ ಹೆಚ್ಚಾಗಿ ಸಾರ್ವಜನಿಕರಿಗೆ ನಿಗದಿತ ಸಮಯದಲ್ಲಿ ಸೇವೆ ಪೂರೈಸುವ ಮತ್ತು ಅವರ ಅಮೂಲ್ಯ ಸಮಯ ಮತ್ತು ಹಣವನ್ನು ಉಳಿಸುವ ಉದ್ದೇಶ ಹೊಂದಿರುವ 'ಸಕಾಲ' ರಾಜ್ಯದಾದ್ಯಂತ ಜಾರಿಗೆ ಬಂದಿದೆ.

ನಾಗರಿಕರಿಗೆ ವಿವಿಧ ರೀತಿಯ ಸೇವೆಗಳನ್ನು ಪೂರೈಸುವ ಹನ್ನೊಂದು ಇಲಾಖೆಗಳಾದ ಕಂದಾಯ, ಶಿಕ್ಷಣ, ಆರ್ಥಿಕ, ಪೊಲೀಸ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಆಹಾರ ಮತ್ತು ನಾಗರೀಕ ಪೂರೈಕೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಸ್ಥಳೀಯ ಸಂಸ್ಥೆಗಳು, ಕಾರ್ಮಿಕ, ಸಾರಿಗೆ ಮತ್ತು ಆರೋಗ್ಯ ಹೀಗೆ ಒಟ್ಟು 151 ಸೇವೆಗಳನ್ನು ಈ ಕಾಯ್ದೆಯ ವ್ಯಾಪ್ತಿಗೆ ತರಲಾಗಿದೆ.

ಇಲಾಖೆಗಳು ನಾಗರಿಕರಿಗೆ ಸೇವೆಯನ್ನು ಪೂರೈಸುವುದರಲ್ಲಿ ವಿಳಂಬವಾದರೆ ವಿಳಂಬಿತ ಅವಧಿಯಲ್ಲಿ ಪ್ರತಿದಿನಕ್ಕೆ ರೂ.20/– ರೂ. ನಂತೆ ಗರಿಷ್ಠ ರೂ.500/–ಗಳ ಮಿತಿಯವರೆಗೆ ಸಂಬಂಧಿತ ನೌಕರರು ಅರ್ಜಿ ಸಲ್ಲಿಸಿದ ಸಾರ್ವಜನಿಕರಿಗೆ ಪರಿಹಾರ ಶುಲ್ಕ ನೀಡಬೇಕಿದೆ.

ಸೇವೆಯನ್ನು ಪಡೆಯಲು ಬಯಸುವ ನಾಗರಿಕರು ಸಂಬಂಧಿಸಿದ ದಾಖಲೆಯನ್ನು ನಿಗದಿಪಡಿಸಿದ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಿದರೆ, ಕೂಡಲೆ ಅವರಿಗೊಂದು 15 ಅಂಕಿಗಳ ಗುರುತಿನ ಸಂಖ್ಯೆಯುಳ್ಳ ರಸೀದಿ ನೀಡಲಾಗುತ್ತದೆ.

ಅರ್ಜಿದಾರರು ಅಂತರ್ ಜಾಲದಲ್ಲಿಯೂ ತಮ್ಮ ಅರ್ಜಿಯ ಪ್ರಗತಿಯನ್ನು ಪರಿಶೀಲಿಸಬಹುದಾಗಿದೆ. ಈ ಪ್ರಗತಿ ಪರಿಶೀಲನೆ ಮತ್ತಿತರ ಎಲ್ಲ ಪ್ರಕ್ರಿಯೆಗಳಿಗೂ ಗ್ರಾಹಕರಿಗೆ ಸ್ವೀಕೃತಿಯಲ್ಲಿ ನೀಡಿದ 15 ಅಂಕಿಯ ಗುರುತಿನ ಸಂಖ್ಯೆಯನ್ನೇ ಬಳಸಬೇಕಾಗಿರುತ್ತದೆ. 'ಸಕಾಲ'ದ ಕಾಲ್ ಸೆಂಟರ್‌ಗೆ ಕರೆಮಾಡಿದಾಗ ಕೂಡ ಈ ಗುರುತಿನ ಸಂಖ್ಯೆ ತಿಳಿಸುವ ಮೂಲಕ ತಮ್ಮ ಅರ್ಜಿಯ ಸ್ಥಿತಿ ಅರಿಯಬಹುದಾಗಿದೆ.

ಹೆಚ್ಚಿನ ಮಾಹಿತಿಗೆ www.sakala.kar.nic.in ಮತ್ತು ಇ–ಮೇಲ್ ವಿಳಾಸ : sakala@kar.in ಮೂಲಕ ಸಾರ್ವಜನಿಕರು ಈ ಕಾಯ್ದೆಯ ಸೌಲಭ್ಯ ಪಡೆದುಕೊಳ್ಳಬಹುದಾಗಿದೆ.

ಬನ್ನಿ ನಿಮ್ಮ ಹಕ್ಕು ಚಲಾಯಿಸಿ ಅನ್ನುತ್ತಿದ್ದಾರೆ ಮುಖ್ಯಮಂತ್ರಿ ಸದಾನಂದ ಗೌಡರು.

ಕೇಂದ್ರದ ಆದಾಯ ತೆರಿಗೆ ಕ್ರಮಕ್ಕೆ ವಿರೋಧ

ಕೇಂದ್ರ ಸರ್ಕಾರವು ಸಹಕಾರ ಸಂಘಗಳಿಗೆ ಆದಾಯ ತೆರಿಗೆಯನ್ನು ವಿಧಿಸುವ ಕ್ರಮವನ್ನು ವಿವಿಧ ಸಹಕಾರ ಸಂಸ್ಥೆಗಳು ತೀವ್ರವಾಗಿ ವಿರೋಧಿಸಿ ತಹಸೀಲ್ದಾರ್‌ರಿಗೆ ಮನವಿ ಸಲ್ಲಿಸಿದ್ದಾರೆ.

ಈ ಕ್ರಮದಿಂದ ಬಡ ಮತ್ತು ಮಧ್ಯಮ ವರ್ಗಗಳ ಆರ್ಥಿಕ ಬೆಳವಣಿಗೆಯ ಮೇಲೆ ಅತೀವ ದುಷ್ಪರಿ ಣಾಮ ಬೀರುತ್ತವೆ ಎಂದು ತಮ್ಮ ಹೇಳಿಕೆಯಲ್ಲಿ ಖಂಡಿಸಿದ್ದಾರೆ. ಸ್ವಯಂ ಸೇವಾ ಸಂಸ್ಥೆಗಳ ಜೊತೆಗೆ ಸಹಕಾರ ಸಂಘಗಳು ಉತ್ತಮವಾಗಿ ಕೆಲಸ ಮಾಡುತ್ತಿದ್ದು ಕೇಂದ್ರವು ಇಂತಹ ಸಹಕಾರ ಸಂಘಗಳಿಗೆ ಆದಾಯ ತೆರಿಗೆ ವಿಧಿಸುವ ನೀತಿಯನ್ನು ಕೂಡಲೇ ಕೈಬಿಡುವಂತೆ ತಮ್ಮ ಹೇಳಿಕೆಯಲ್ಲಿ ಕೇಂದ್ರಕ್ಕೆ ಮನವಿ ಮಾಡಿದ್ದಾರೆ.

ಸಹಕಾರ ಕ್ಷೇತ್ರ ಬಂದ್ ಆಚರಣೆ

ದಿನಾಂಕ : 12–3–2012ರಂದು ರಾಜ್ಯಾದ್ಯಂತ ಸಹಕಾರಿ ಸಂಸ್ಥೆಗಳು ಕೇಂದ್ರದ ನೇರ ತೆರಿಗೆ ಸಂಹಿತೆ ವಿರೋಧಿಸಿ ವ್ಯಾಪಾರ ವಹಿವಾಟುಗಳನ್ನು ಸ್ಥಗಿತಗೊಳಿಸಿ ನೇರ ತೆರಿಗೆ ಸಂಹಿತೆಯಲ್ಲಿ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಮಾರಕವಾಗುವ ವಿಷಯಗಳನ್ನು ಅಳವಡಿಸಿರುವುದಕ್ಕಾಗಿ ವಿರೋಧ ವ್ಯಕ್ತಪಡಿಸಿದರು. ರಾಜ್ಯಾದ್ಯಂತ ನಡೆಸಿದ ಬಂದ್ ಆಚರಣೆಯ ಬಗ್ಗೆ ಲಭ್ಯವಾಗಿರುವ ಕೆಲವು ವರದಿ ಹಾಗೂ ಛಾಯಾ ಚಿತ್ರಗಳನ್ನು ಇಲ್ಲಿ ಪ್ರಕಟಿಸಲಾಗಿದೆ.

ಪಾವಗಡ ಸೌಹಾರ್ದ ಸಹಕಾರಿ ನಿರ್ದೇಶಕ ರವಿ, ನಟರಾಜು, ಲಕ್ಷ್ಮೀ ನಾರಾಯಣ ಹಾಗೂ ಮಂಜುನಾಥ್, ಸಾಗರ್ ಅವರುಗಳು ಮನವಿಪತ್ರ ಸಲ್ಲಿಸುತ್ತಿರುವುದು.

“ನೇರ ತೆರಿಗೆ ಸಂಹಿತೆ” ಜಾರಿ ಒಂದು ವರ್ಷ ಮುಂದಕ್ಕೆ; ಸಹಕಾರಿಗಳು ಸಧ್ಯಕ್ಕೆ ನಿರಾಳ

2012–13 ಆಯವ್ಯಯ ಮಂಡನೆ ಯಾಗುವಾಗ ಕೇಂದ್ರದ ಬಹು ನಿರೀಕ್ಷಿತ ನೇರ ತೆರಿಗೆ ಸಂಹಿತೆಯ ಜಾರಿಯಾಗಬಹುದೆಂದು ನಿರೀಕ್ಷಿಸಲಾಗಿತ್ತು. ಈ ನೇರತೆರಿಗೆ ಸಂಹಿತೆಯಲ್ಲಿ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಮಾರಕವಾಗಬಹುದಾಗಿದ್ದ ಅಂಶಗಳನ್ನು ತೆಗೆದುಹಾಕಿ ಮೊದಲಿನಂತೆ ಸಹಕಾರಿ ಕ್ಷೇತ್ರವನ್ನು ತೆರಿಗೆ ಮುಕ್ತ ವಲಯವನ್ನಾಗಿ ಮುಂದುವರೆಸಲು ರಾಜ್ಯದ ಕ್ರೆಡಿಟ್ ಸಹಕಾರ ಸಂಘಗಳ ಅಸ್ಸೋಸಿಯೇಶನ್ ನೇತೃತ್ವದಲ್ಲಿ ಮಹಾಮಂಡಳಗಳ ಹಾಗೂ ಎಲ್ಲ ಕ್ರೆಡಿಟ್ ಸಹಕಾರಗಳ ಸಹಯೋಗದೊಂದಿಗೆ ಸಭೆ ಸಮಾರಂಭ ಸಮಾವೇಶಗಳನ್ನು ನಡೆಸಿ ಸಂಬಂಧಿಸಿದವರಿಗೆ ಮನವಿಗಳನ್ನು ಸಲ್ಲಿಸಲಾಗಿತ್ತು. ಕೇಂದ್ರದ ಹಣಕಾಸು ಸಚಿವರನ್ನು, ಕೇಂದ್ರ ತೆರಿಗೆ ಮಂಡಳಿಯ ಅಧ್ಯಕ್ಷರನ್ನು ಸಂಸದೀಯ ಸ್ಥಾಯಿ ಸಮೀತಿ ಅದ್ಯಕ್ಷರನ್ನು ಕೇಂದ್ರದಲ್ಲಿ ರಾಜ್ಯದ ಪ್ರತಿನಿಧಿಯವರನ್ನು, ರಾಜ್ಯದ ಮುಖ್ಯಮಂತ್ರಿಗಳನ್ನು ಭೇಟಿಮಾಡಿ ವಿವರಣೆ ಸಲ್ಲಿಸಲಾಗಿತ್ತು. ಸಹಕಾರಿ ಸಂಸ್ಥೆಗಳ ಕೂಗು ಹಣಕಾಸು ಮಂತ್ರಿಯವರಿಗೆ ಮುಟ್ಟಿತೊ ಹೇಗೂ ಕೇಂದ್ರದ 2012–13 ನೇ ಸಾಲಿನ ಬಡ್ಜೆಟ್‌ನಲ್ಲಿ ನೇರ ತೆರಿಗೆ ಸಂಹಿತೆ ಜಾರಿಯನ್ನು ಒಂದು ವರ್ಷದ ಮಟ್ಟಿಗೆ ಮುಂದೋಡಲಾಗಿದೆ ಎಂದು ಹಣಕಾಸು ಸಚಿವ ಶ್ರೀ ಪ್ರಣವ ಮುಖರ್ಜಿಯವರು ಹೇಳಿರುವುದು ಸಹಕಾರಿ ಸಂಸ್ಥೆಗಳು ಸಧ್ಯಕ್ಕೆ ನಿರಾಳವಾಗಿ ಉಸಿರಾಡುವಂತಾಗಿದೆ.

ನೇರ ತೆರಿಗೆ ಸಂಹಿತೆಯಲ್ಲಿ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಮಾರಕವಾಗುವ ವಿಷಯಗಳನ್ನು ಕೈಬಿಡುವಂತೆ ಒತ್ತಾಯಿಸಲು ಹೆಚ್ಚಿನ ಕಾಲಾವಕಾಶ ದೊರೆತಂತಾಗಿದೆ.

ಹಿನ್ನೆಲೆಯಲ್ಲಿ ಕೃಷಿಗೆ ಸಂಬಂಧಿಸಿದಂತೆ ಶೇಕಡಾ 18 ರಷ್ಟು ಹೆಚ್ಚಳ ಮಾಡಿರುವುದು ಅಂತಹ ಗಣನೀಯ ವಿಷಯವೇನಲ್ಲ.

ನಮ್ಮ ರೈತರೇನೂ ನಗರವಾಸಿಗಳಿಗಿಂತ ಕಡಿಮೆಯೇನಲ್ಲ. ಅವರಿಗೂ ನೂತನ ತಂತ್ರಜ್ಞಾನದ ಸವಲತ್ತುಗಳು ದೊರೆಯಬೇಕು ಎಂಬ ಅರ್ಥದಲ್ಲಿ ಗ್ರಹಿಸಬಹುದು ಎನ್ನುವಂತೆ ಇನ್ನು ಮುಂದೆ ರೈತರು ಬಳಸುವ "ಕಿಸಾನ್ ಕ್ರೆಡಿಟ್ ಕಾರ್ಡ್" ಯೋಜನೆಯನ್ನು ಸಾಂಪ್ರದಾಯಿಕ ಬ್ಯಾಂಕಿಂಗ್‌ನಿಂದ ಹೊರತಂದು ಸ್ಮಾರ್ಟ್ ಕಾರ್ಡ್‌ಗಳ ಮೂಲಕ ಎಟಿಎಂಗಳಲ್ಲಿ ಹಣ ಪಡೆಯುವಂತೆ ವ್ಯವಸ್ಥೆಯನ್ನು ಕಲ್ಪಿಸಲು ಬಜೆಟ್ಟಿನಲ್ಲಿ ಸೂಚಿಸಲಾಗಿದೆ. ಈ ವ್ಯವಸ್ಥೆ ನಮ್ಮ ರೈತರನ್ನು ತಮ್ಮ ಊರಿನ ಬ್ಯಾಂಕುಗಳ ಮೂಲಕ ತಲುಪಲು ಕೆಲ ಸಮಯ ಹಿಡಿಯಬಹುದು.

ಇನ್ನು ಸಹಕಾರಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಆತಂಕವಾಗಿದ್ದ ತೆರಿಗೆ ವಿಚಾರ, ನೇರ ತೆರಿಗೆ ಸಂಹಿತೆಯಲ್ಲಿ ಸಂಪೂರ್ಣ ತೆರಿಗೆಗೆ ಒಳಗಾಗಬೇಕಾಗಿದ್ದ ಸಹಕಾರಿ ಕ್ಷೇತ್ರ ಈ ಬಜೆಟ್ಟಿನಿಂದಾಗಿ ಸಮಾಧಾನದ ನಿಟ್ಟುಸಿರು ಬಿಡುವಂತಾಗಿದೆ. ನೇರ ತೆರಿಗೆ ಸಂಹಿತೆಯನ್ನು ಇದೇ ಏಪ್ರಿಲ್ 2012 ರಿಂದ ಅಳವಡಿಸುವಂತೆ ತೋರುತ್ತಿದ್ದ ಪರಿಸ್ಥಿತಿ ಈಗ ಮುಂದಿನ ಬಜೆಟ್ಟಿಗೆ ಮುಂದೂಡಿಕೆಯಾಗಿದೆ. ಆರ್ಥಿಕ ತಜ್ಞರು ಹೇಳುವಂತೆ ಮುಂದಾದ ಬಜೆಟ್ಟು ಈಗಿನ ಸರ್ಕಾರದ ಅವಧಿಯ ಕೊನೆಯ ಬಜೆಟ್ ಆಗುವುದರಿಂದ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಮುಂದಿನ 2013 ರ ಬಜೆಟ್‌ನಲ್ಲಿ ಕೂಡ ನೇರ ತೆರಿಗೆ ಸಂಹಿತೆ ಮಂಡನೆ ಆಗದೆ ಇರುವ ಸಾಧ್ಯತೆಗಳಿವೆ. ಹಾಗಾಗಿ ನೇರ ತೆರಿಗೆ ಸಂಹಿತೆಯಲ್ಲಿ ತೀವ್ರವಾದ ತೆರಿಗೆಯ ಒತ್ತಡಕ್ಕೆ ಸಿಲುಕಬಹುದಾಗಿದ್ದ ಸಹಕಾರಿ ಕ್ಷೇತ್ರ ಹೊಸ ಸರ್ಕಾರ ಬರುವವರೆಗೆ ಸಮಧಾನದಿಂದಿದ್ದು ತನ್ನದೇ ಆದ ಕಾರ್ಯತಂತ್ರಗಳನ್ನು ರೂಪಿಸಿಕೊಳ್ಳುವಲ್ಲಿ ಚಿಂತಿಸಬೇಕಿದೆ. ಜಿ.ಎಸ್.ಟಿ. ಎಂಬ ಸರಕು ಸೇವೆಗಳ ಹೊಸ ತೆರಿಗೆಯೂ ಕೂಡ ಮುಂದಿನ ವರ್ಷಕ್ಕೆ ಮಂದೂಡಲ್ಪಟ್ಟಿದೆ. ಸಹಕಾರಿ ಕ್ಷೇತ್ರಕ್ಕೆ ಸಂಬಂಧಿಸಿದ ತೆರಿಗೆ ದರಗಳಲ್ಲಿ ಯಾವುದೇ ವ್ಯತ್ಯಯ ಉಂಟಾಗಿಲ್ಲ. 80ಪಿ ತೆರಿಗೆ ವಿನಾಯಿತಿ ಅರ್ಹವಲ್ಲದ ಆದಾಯವನ್ನು ಹೊಂದುವ ಎಲ್ಲಾ ಸಹಕಾರ ಸಂಘಗಳು ಕಳೆದ ವರ್ಷದಲ್ಲಿ ಜಾರಿಯಿದ್ದ ದರದಲ್ಲೇ ಆದಾಯ ತೆರಿಗೆಯನ್ನು ತೆರಬೇಕಾಗುತ್ತದೆ.

ಈ ಬಾರಿ ತಂದಿರುವ ಹೊಸ ತಿದ್ದುಪಡಿಯ ಪ್ರಕಾರ ತೆರಿಗೆದಾರರು ತಮ್ಮ ಉಳಿತಾಯ ಖಾತೆಯಲ್ಲಿನ ಹಣದ ಮೇಲೆ ಗಳಿಸುವ ಬಡ್ಡಿಗೆ ವಾರ್ಷಿಕ ಗರಿಷ್ಠ ಹತ್ತು ಸಾವಿರ ರೂಪಾಯಿಗಳ ತೆರಿಗೆ ವಿನಾಯಿತಿ ಪಡೆಯಲು ಅರ್ಹರಾಗಿರುತ್ತಾರೆ. ಕಳೆದ ವರ್ಷ ಉಳಿತಾಯ ಖಾತೆಯ ಮೇಲೆ ಗಳಿಸಿದ ಬಡ್ಡಿ ಹಣ ಅದು ಎಷ್ಟೇ ಕಡಿಮೆ ಮಾತ್ರವಿದ್ದರೂ ತೆರಿಗೆಗೆ ಒಳಗಾಗುವ ಪರಿಸ್ಥಿತಿ ಇತ್ತು. ಇದನ್ನು ಮನಗಂಡ ಸರ್ಕಾರ 01-04-2012ರ ನಂತರ ಬರುವ ಉಳಿತಾಯ ಖಾತೆಯ ಬಡ್ಡಿ ಹಣದ ಮೇಲೆ ಹತ್ತು ಸಾವಿರ ರೂಪಾಯಿಗಳವರೆಗೆ ತೆರಿಗೆ ವಿನಾಯಿತಿಯನ್ನು ನೀಡಿದೆ.

ಈ ತೆರಿಗೆ ವಿನಾಯಿತಿಯ ವಿಶೇಷವೆಂದರೆ ಉಳಿತಾಯ ಖಾತೆ ಎಂದರೆ ರಾಷ್ಟ್ರೀಕೃತ ಬ್ಯಾಂಕುಗಳಂತೆ ಯಾವುದೇ ಸಹಕಾರಿ ಬ್ಯಾಂಕುಗಳಲ್ಲಿ ಅಥವಾ ಪತ್ತಿನ ಸಹಕಾರಿ ಸಂಘಗಳಲ್ಲಿ ಇರುವ ಉಳಿತಾಯ ಖಾತೆ. ಹಾಗಾಗಿ ಸಹಕಾರಿ ರಂಗದ ಸದಸ್ಯರು ಈ ಹೊಸ ತೆರಿಗೆ ವಿನಾಯಿತಿಗೆ ಅರ್ಹರಾಗಿದ್ದಾರೆ. ಡಿ.ವಿ.ಜಿ.ಯವರ ಕಗ್ಗದ ಸಾಲುಗಳನ್ನೇ ಮುಂದುವರಿಸುವುದಾದರೆ "ನಲುಮೆಯನು ಹೊರಹೊಮ್ಮಿಸುವುದು ನರನುನ್ನತಿಕೆ" ಎಂಬಂತೆ ತೆರಿಗೆಯ ಭಾರದಲ್ಲಿ ಮಧ್ಯೆ ಮಧ್ಯೆ ತೆರಿಗೆ ವಿನಾಯಿತಿಯನ್ನು ನಲ್ಮೆಯಿಂದ ಹೊರಹೊಮ್ಮಿಸುತ್ತಿರುವುದು ಅರ್ಥಮಂತ್ರಿಯ ಉನ್ನತಿ.

ಅಣ್ಣಾ ಹಜಾರೆ, ಬಾಬಾ ರಾಮದೇವರಂತಹವರಿಂದ ಜನಜನಿತವಾಗಿ ಚರ್ಚೆಯಾಗುತ್ತಿರುವ ಕಾಳಧನ ಮತ್ತು ಮತ್ತು ವಿದೇಶದಲ್ಲಿರುವ ಭಾರತೀಯ ಹಣದ ಬಗ್ಗೆ ಈ ಬಾರಿಯ ಬಜೆಟ್‌ನಲ್ಲಿ ಪ್ರಸ್ತಾಪವಾಗಿದೆ. ವಿದೇಶ ಗಳಲ್ಲಿರುವ ಭಾರತೀಯರ ಹಣವನ್ನು ಗುರುತಿಸಲು ಮತ್ತು ನಿಯಂತ್ರಣಕ್ಕೆ ತರಲು ಹಲವು ಹನ್ನೊಂದು ಬಗೆಯ ಪಾಶಗಳನ್ನು ಬೀಸಿರುವುದಾಗಿ ಪ್ರಣಬ್ ಮುಖರ್ಜಿ ಹೇಳಿಕೊಂಡಿದ್ದಾರೆ. "ಕಪ್ಪು" ಹಣದ ಮೇಲೊಂದು "ಶ್ವೇತ" ಪತ್ರವನ್ನು ತಯಾರಿಸಿ ಸಂಸತ್ತಿನ ಮುಂದಿಡುತ್ತೇನೆಂದು ಹೇಳಿರುವ ಪ್ರಣಬ್ ಹೇಳಿಕೆ ಹಣದ ಬಣ್ಣಗಳ ಮೇಲಿನ ಹೊಸ ಜೋಕ್ ಎಂಬಂತಾಗಿಬಿಟ್ಟಿದೆ.

ಸತ್ಯ ಘಟನೆ

ಆಗ ಭಿಕ್ಷುಕರು ಈಗ ಸಹಕಾರಿಗಳು

ಅಂತರ ರಾಷ್ಟ್ರೀಯ ಸಹಕಾರ ವರ್ಷ 2012 ಆಚರಣೆಯ ಅಂಗವಾಗಿ ಇತ್ತೀಚೆಗೆ ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಅಂತರ ರಾಷ್ಟ್ರೀಯ ಸಹಕಾರ ಸಮ್ಮೇಳನ ನಡೆದ ಸಂದರ್ಭದಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಹಿರಿಯ ನಿವೃತ್ತ ಅಧಿಕಾರಿಯೊಬ್ಬರು ತಿಳಿಸಿದ ಸತ್ಯ ಘಟನೆಯ ವಿವರ ಹೀಗಿದೆ.

ಉತ್ತರ ಪ್ರದೇಶದ ಒಂದು ಪ್ರಸಿದ್ಧ ದೇವಸ್ಥಾನದ ಹೊರಗಡೆ ಭಿಕ್ಷುಕರ ಸಂಖ್ಯೆ ಜಾಸ್ತಿ ಇತ್ತು. ಅದರಲ್ಲಿ ಒಬ್ಬ ಭಿಕ್ಷುಕ ಹೆಚ್ಚಿಗೆ ಭಿಕ್ಷೆ ಬೇಡುತ್ತಿದ್ದ. ಅವನನ್ನು ಯಾಕಪ್ಪಾ ಇಷ್ಟೊಂದು ಭಿಕ್ಷೆ ಬೇಡುತ್ತಿಯಾ ಎಂದು ಕೇಳಿದಾಗ ನಾನು ಯಾವ ಕರ್ಮದಿಂದಲೂ

ಭಿಕ್ಷೆ ಬೇಡುತ್ತಿದ್ದೇನೆ ಇದು ನನ್ನ ತಲೆಗೆ ಮುಗಿಯಬೇಕು. ನನ್ನ ಮಗ ಭಿಕ್ಷೆ ಬೇಡಬಾರದು. ಈ ನಮ್ಮ ಭಿಕ್ಷುಕರಿಗೆ ಯಾವುದೇ ಸಂಘಟಿತ ವ್ಯವಸ್ಥೆಯಿಲ್ಲ. ನಮ್ಮ ಗೋಳು ಕೇಳುವವರಿಲ್ಲ ನಮಗೆ ಸಹಾಯ ಮಾಡುವವರಿಲ್ಲ ಇತ್ಯಾದಿ ಗೋಳು ಹೇಳಿದ.

ನಂತರ ಆ ಭಿಕ್ಷುಕರನ್ನೆಲ್ಲ ಒಂದು ಜಾಗದಲ್ಲಿ ಕೂಡಿಸಿ ಅವರಿಗೆ ಸಂಘಟಿತರಾಗಿ ಒಂದು ಸಹಕಾರಿ ಸಂಘವನ್ನು ಸ್ಥಾಪಿಸಲು ಹೇಳಿ ಸಹಕಾರಿ ಸಂಸ್ಥೆಯ ಪ್ರಯೋಜನೆ ಹಾಗೂ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿ ಅವರು ಸಹಕಾರಿ ಸಂಸ್ಥೆಯನ್ನು ಸ್ಥಾಪಿಸಲು ಮಾರ್ಗದರ್ಶನ ನೀಡಲಾಯಿತು.

ಅವರೆಲ್ಲ ಸಹಕಾರಿ ಸಂಸ್ಥೆಯ ಪ್ರಯೋಜನ ಪಡೆದು ಈಗ ಉತ್ತಮ ಜೀವನ ನಡೆಸುತ್ತಿದ್ದಾರೆ. ಆ ದೇವಸ್ಥಾನದ ಬಳಿ ಭಿಕ್ಷುಕರೆ ಇಲ್ಲ. ಇದು ಸಹಕಾರಿಯ ಅತ್ಭುತ ಸಾಧನೆಯಲ್ಲವೇ. ಇಂತಹ ಅವಕಾಶಗಳು ಎಲ್ಲರಿಗೂ ಇದೆ.

2012 – 13ನೇ ಸಾಲಿನ ಬಜೆಟ್ : ತೆರಿಗೆಯೆಂಬ ಕ್ರೌರ್ಯ ರಿಯಾಯಿತಿಯೆಂಬ ದಯೆ

ಎಚ್. ಶಿವಕುಮಾರ್ ಚಾರ್ಟೆಡ್ ಅಕೌಂಟೆಂಟ್ shivakumar.h@icai.org

ಕ್ರೌರ್ಯ ಮತ್ತು ದಯೆ – ಇವೆರೆಡು ಪರಸ್ಪರ ವಿರೋಧಿ ಪದಗಳು. ಕ್ರೌರ್ಯವಿದ್ದಲ್ಲಿ ದಯೆಗೆ ಸ್ಥಾನವಿಲ್ಲ. ಹಾಗೆಯೇ ದಯೆಯ ವಾತಾವರಣದಲ್ಲಿ ಕ್ರೌರ್ಯದ ಕುರುಹು ಇರುವುದಿಲ್ಲ. "ನಾನು ದಯಾಮಯನಾಗಲು ಕ್ರೂರಿಯಾಗಲೇಬೇಕಿದೆ" ಎಂದು ಯಾರಾದರೂ ಹೇಳಿದ್ದಲ್ಲಿ ಅದು ಅತ್ಯಂತ ವಿರೋಧಾಭಾಸದ ಹೇಳಿಕೆಯಾಗುತ್ತದೆ. ಶೇಕ್ಸ್‌ಪಿಯರ್‌ನ ಹ್ಯಾಮ್ಲೆಟ್ ನಾಟಕದಲ್ಲಿ ಬರುವ ಇಂತಹ ವಿರೋಧಭಾಸದ ಹೇಳಿಕೆಯನ್ನು ಮುಂದಿರಿಸಿಕೊಂಡು 2012ರ ಕೇಂದ್ರ ಬಜೆಟ್ಟನ್ನು ಪ್ರಣಬ್ ಮುಖರ್ಜಿ ಸಂಸತ್ತಿನಲ್ಲಿ ಮಂಡಿಸಿದ್ದಾರೆ. ತಮ್ಮ ಬಜೆಟ್ ಭಾಷಣದ ಮೊದಲರ್ಧದಲ್ಲಿ ಭರವಸೆಗಳ ಮಹಾಪೂರವನ್ನೇ ಹರಸಿ ಎರಡನೇ ಭಾಗವಾದ ತೆರಿಗೆ ಹೊರೆಯ ಪ್ರಸ್ತಾಪವನ್ನು ಮಂಡಿಸುವ ಸಂದರ್ಭದಲ್ಲಿ ಶೇಕ್ಸ್‌ಪಿಯರ್‌ನ ಈ ಮಾತನ್ನು ಆಸರೆಯಾಗಿ ತೆಗೆದುಕೊಂಡು ಜನರ ಮೇಲೆ ತೆರಿಗೆ ಭಾರ ಹೆಚ್ಚಿಸಿರುವುದು 2012 ರ ಬಜೆಟ್‌ನ ವಿಶೇಷ. ಕ್ರೌರ್ಯದ ಬಗ್ಗೆ ಮಾತನಾಡುವಾಗ ಡಿ.ವಿ.ಜಿ.ಯವರ ಕಗ್ಗದ ಸಾಲೊಂದು ನೆನಪಾಗುತ್ತದೆ. "ಕೊಲೆಗಡುಕನೆನಿಪ ಹುಲಿ ಸಲಹದೇಂ ಮರಿಗಳನು"? ತೆರಿಗೆಗಳನ್ನು ವಿಧಿಸಿ ಶ್ರೀಸಾಮಾನ್ಯರ ಮೇಲೆ ಕ್ರೌರ್ಯವನ್ನು ಮೆರೆಯುವ ಆಳುವ ಸರ್ಕಾರ ತನ್ನ ಪ್ರಜೆಗಳನ್ನು ಸಲಹುದುದಕ್ಕಾಗಿ ಏನು ಕಲ್ಯಾಣಕರ ಕ್ರಮಗಳನ್ನು ಕೈಗೊಂಡಿದೆ ಎಂದು ವಿಚಾರಿಸುವುದು ಬಜೆಟ್ಟೊಂದರ ಸಂಪೂರ್ಣ ವಿಶ್ಲೇಷಣೆ ಮಾಡಿದಂತೆ.

ಬಜೆಟ್ ಎಂದರೆ ಕೇವಲ ಅಂಕಿ ಅಂಶಗಳ ನಿರ್ಜೀವ ಕಗ್ಗಂಟಲ್ಲ. ಬಜೆಟ್‌ನ ಪ್ರತಿಯೊಂದು ಅಂಶವೂ ಅದಕ್ಕೆ ಸಂಬಂಧಿಸಿದ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಜೀವಜಲವನ್ನೇ ಸ್ಫುರಿಸಬಲ್ಲುದು. ಹಾಗೆಯೇ ನಿಸ್ತೇಜಗೊಳಿಸಲೂ ಶಕ್ತವಾದದ್ದು. ಆದ್ದರಿಂದ ಬಜೆಟ್ ಎಂದರೆ ಮಂಡನೆಯಾದ ಮರುದಿನದ ವೃತ್ತಪತ್ರಿಕೆಗಳ ಮುಖಪುಟದಲ್ಲಿ ರಾರಾಜಿಸುವಂತೆ ಕೇವಲ ಸಿಗರೇಟು, ಬೀಡಿ ದರದಲ್ಲಿ ವ್ಯತ್ಯಯ, ಟಿವಿ, ಕಂಪ್ಯೂಟರ್, ಮೊಬೈಲುಗಳು ಅಗ್ಗವಾಗುವುದು, ಕಾರು ದುಬಾರಿಯಾಗುವುದು ಮುಂತಾದವುಗಳು ಅಲ್ಲ.

ಇನ್ನು ಸಹಕಾರಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಆತಂಕವಾಗಿದ್ದ ತೆರಿಗೆ ವಿಚಾರ, ನೇರ ತೆರಿಗೆ ಸಂಹಿತೆಯಲ್ಲಿ ಸಂಪೂರ್ಣ ತೆರಿಗೆಗೆ ಒಳಗಾಗಬೇಕಾಗಿದ್ದ ಸಹಕಾರಿ ಕ್ಷೇತ್ರ ಈ ಬಜೆಟ್ಟಿನಿಂದಾಗಿ ಸಮಾಧಾನದ ನಿಟ್ಟುಸಿರು ಬಿಡುವಂತಾಗಿದೆ. ನೇರ ತೆರಿಗೆ ಸಂಹಿತೆಯನ್ನು ಇದೇ ಏಪ್ರಿಲ್ 2012 ರಿಂದ ಅಳವಡಿಸುವಂತೆ ತೋರುತ್ತಿದ್ದ ಪರಿಸ್ಥಿತಿ ಈಗ ಮುಂದಿನ ಬಜೆಟ್ಟಿಗೆ ಮುಂದೂಡಿಕೆಯಾಗಿದೆ.

ಬಜೆಟ್‌ನಲ್ಲಿ ಪ್ರಸ್ತಾಪವಾಗುವ ಪ್ರಮುಖ ಅಂಶಗಳು: ಸರ್ಕಾರ ನೀಡುವ ಕ್ಷೇತ್ರವಾರು ಸಹಾಯಧನಗಳು, ಬ್ಯಾಂಕಿಂಗ್ ವ್ಯವಹಾರಗಳಲ್ಲಿ ಸುಧಾರಣೆ ಮೂಲ ಸೌಕರ್ಯ ಯೋಜನೆಗಳು, ವಿದ್ಯುತ್, ಸರಕು ಸಾಗಾಣಿಕೆ, ವಸತಿ ಮತ್ತು ವಸ್ತ್ರಯೋಜನೆಗಳು, ಆಹಾರ ಸರಬರಾಜು, ಕೃಷಿ, ಕೃಷಿಗೆ ಧನಸಹಾಯ, ನೀರಾವರಿ ಗ್ರಾಮೀಣಾಭಿವೃದ್ಧಿ, ಶಿಕ್ಷಣ, ಉದ್ಯೋಗ, ಒಳಾಡಳಿತಕ್ಕೆ ಸಂಬಂಧಿಸಿದ ಕ್ರಮಗಳು. ಈ ಪ್ರಮುಖ ಕ್ಷೇತ್ರಗಳಲ್ಲಿ ಬಜೆಟ್ ಮೂಲಕ ಸರ್ಕಾರ ತರಲೆತ್ನಿಸಿರುವ ಕ್ರಮಗಳು ಜನರನ್ನು ತಲುಪಲು ಮುರ್‍ನಾಲ್ಕು ತಿಂಗಳುಗಳೇ ಆಗಿ ಹೋಗುತ್ತದೆ. ಆದರೆ ಸರ್ಕಾರ ಬಜೆಟ್ ಮೂಲಕ ವಿಧಿಸುವ ಹೊಸ ತೆರಿಗೆಗಳು ಮತ್ತು ತೆರಿಗೆದಾರರು ಬಜೆಟ್ ಮಂಡನೆಯಿಂದ ಮರುದಿನದಿಂದಲೇ ಅಥವಾ ಹೊಸ ಆರ್ಥಿಕ ವರ್ಷದ ಏಪ್ರಿಲ್ ಒಂದರಿಂದ ಕೂಡಲೇ ಜಾರಿಯಾಗುತ್ತವೆ. ಹಾಗಾಗಿ ನಮ್ಮ ಮಾಧ್ಯಮದ ಮಂದಿ ರೋಚಕ ವಿಷಯಗಳನ್ನು "ಬ್ರೇಕಿಂಗ್ ನ್ಯೂಸ್" ಮಾದರಿಯಲ್ಲಿ ಜನರಿಗೆ ಕೊಡಲು ಸಿಗರೇಟು ಬೀಡಿಗಳ, ಮೊಬೈಲು, ಕಾರುಗಳ ದರದಲ್ಲಿನ ವ್ಯತ್ಯಯವನ್ನು ಎತ್ತಿ ಹಿಡಿದು ವರದಿ ಮಾಡುತ್ತಿರುವುದು ಹಲವಾರು ವರ್ಷಗಳಿಂದ ಅವ್ಯಾಹತವಾಗಿ ನಡೆದು ಬಂದಿದ್ದಿದೆ.

ಕೃಷಿ ಮತ್ತು ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕಳೆದ ವರ್ಷಕ್ಕಿಂತ ಶೇಕಡಾ ಹದಿನೆಂಟು ಪಟ್ಟು ಹೆಚ್ಚಿನ ಸಂಪನ್ಮೂಲಗಳನ್ನು ಮೀಸಲಾಗಿಸಿರುವುದು, 2012ರ ಬಜೆಟ್‌ನ ಒಂದು ಅಂಶ. ದೇಶದ ಬಜೆಟ್‌ನ ಒಟ್ಟಾರೆ ಗಾತ್ರ ವರ್ಷದಿಂದ ವರ್ಷಕ್ಕೆ ಹಿಗ್ಗುತ್ತಾ ಹೋಗುತ್ತಿರುವ

ತ್ರಿವೇಂದ್ರಮ್‌ನಲ್ಲಿ ರಾಷ್ಟ್ರೀಯ ಸಹಕಾರ ಯೂನಿಯನ್ನಿನ ದಕ್ಷಿಣ ವಲಯ ಸಹಕಾರ ಸಮ್ಮೇಳನ

ದಕ್ಷಿಣ ವಲಯದಲ್ಲಿ ಇದುವರೆಗಿನ ಸಹಕಾರ ಕ್ಷೇತ್ರದ ಬೆಳವಣಿಗೆ ಹಾಗೂ ಸಹಕಾರ ಕ್ಷೇತ್ರ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸುವುದು ಹಾಗೂ ಆ ಸಮಸ್ಯೆಗಳಿಂದ ಹೊರಬರುವುದರೆಡೆಗೆ ಕಾರ್ಯಯೋಜನೆಗಳನ್ನ ರೂಪಿಸಿಕೊಳ್ಳುವುದು ಈ ಸಮ್ಮೇಳನದ ಉದ್ದೇಶವಾಗಿತ್ತು.

2012ನ್ನು ಅಂತಾರಾಷ್ಟ್ರೀಯ ಸಹಕಾರ ವರ್ಷವನ್ನಾಗಿ ವಿಶ್ವಸಂಸ್ಥೆ ಘೋಷಿಸಿದ ಹಿನ್ನಲೆಯಲ್ಲಿ ಸಹಕಾರ ಕ್ಷೇತ್ರದ ಮುಂಚೂಣಿಯಲ್ಲಿರುವ ಅನೇಕ ರಾಷ್ಟ್ರಮಟ್ಟದ ಸಹಕಾರಿ ಸಂಘಟನೆಗಳು ಭಾರತದಾದ್ಯಂತ ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುವುದರ ಮೂಲಕ ಆಚರಿಸುತ್ತಿರುವುದು ಉತ್ತಮ ಬೆಳವಣಿಗೆ. ಈ ಆಚರಣೆಯ ಉದ್ದೇಶವನ್ನಿಟ್ಟುಕೊಂಡು ರಾಷ್ಟ್ರೀಯ ಸಹಕಾರ ಯೂನಿಯನ್, ನವದೆಹಲಿ ಇದು ಕೇರಳ ರಾಜ್ಯ ಸಹಕಾರ ಯೂನಿಯನ್ ಜೊತೆ ಸೇರಿ ಭಾರತದ ದಕ್ಷಿಣ ವಲಯದ ಸಹಕಾರ ಸಮ್ಮೇಳನವನ್ನು ಕೇರಳದ ರಾಜಧಾನಿ ತ್ರಿವೇಂಡ್ರಮ್‌ನಲ್ಲಿ ದಿನಾಂಕ:12.03.2012ರಂದು ಏರ್ಪಡಿಸಿತ್ತು.

ಈ ಸಮ್ಮೇಳನದಲ್ಲಿ ಕೇರಳ, ಆಂಧ್ರಪ್ರದೇಶ, ತಮಿಳುನಾಡು, ಕರ್ನಾಟಕ ಹಾಗೂ ಪಾಂಡಿಚೇರಿ ರಾಜ್ಯಗಳ ಸಹಕಾರ ಸಂಸ್ಥೆಗಳ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರುಗಳು ಪ್ರತಿನಿಧಿಗಳಾಗಿ ಭಾಗವಹಿಸಿದ್ದರು. ದಕ್ಷಿಣ ವಲಯದಲ್ಲಿ ಇದುವರೆಗಿನ ಸಹಕಾರ ಕ್ಷೇತ್ರದ ಬೆಳವಣಿಗೆ ಹಾಗೂ ಸಹಕಾರ ಕ್ಷೇತ್ರ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸುವುದು ಹಾಗೂ ಆ ಸಮಸ್ಯೆಗಳಿಂದ ಹೊರಬರುವುದರೆಡೆಗೆ ಕಾರ್ಯಯೋಜನೆಗಳನ್ನ ರೂಪಿಸಿಕೊಳ್ಳುವುದು ಈ ಸಮ್ಮೇಳನದ ಉದ್ದೇಶವಾಗಿತ್ತು. ಜೊತೆಗೆ ಈ ಸಮ್ಮೇಳನದ ಮೂಲಕ ದಕ್ಷಿಣ ವಲಯದಲ್ಲಿ ಸಹಕಾರ ಕ್ಷೇತ್ರವನ್ನು ಪ್ರಚುರಪಡಿಸುವುದು ಹಾಗೂ ಸಹಕಾರ ಕ್ಷೇತ್ರವನ್ನು ಆರ್ಥಿಕ ವ್ಯವಹಾರದ ಮಾದರಿಯನ್ನಾಗಿ ರೂಪಿಸುವುದ ರತ್ತ ಗಮನ ಹರಿಸುವ ಪ್ರಯತ್ನ ಮಾಡುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿತ್ತು.

ಸಮ್ಮೇಳನದ ಉದ್ಘಾಟನೆಯನ್ನು ಕೇರಳದ ಯೋಜನಾ ಮಂಡಳಿಯ ಉಪಾಧ್ಯಕ್ಷರಾದ ಡಾ.ಕೆ.ಎಂ ಚಂದ್ರಶೇಖರ ಇವರು ನೆರವೇರಿಸಿ ಕಾರ್ಯಕ್ರಮದ ಉದ್ದೇಶವನ್ನು ಸ್ಪಷ್ಟಪಡಿಸಿದರು ಹಾಗೂ ಉದ್ದೇಶ ಸಫಲವಾಗುವಂತೆ ಕಾರ್ಯ ಕ್ರಮಗಳನ್ನು ಸಹಕಾರಿಗಳು ಹಮ್ಮಿಕೊಳ್ಳಬೇಕೆಂದು ಸೂಚಿಸಿದರು. ಕೇರಳ ರಾಜ್ಯದ ನಿಬಂಧಕರಾದ ಶ್ರೀ ಕೆ.ವಿ.ಸುರೇಶ ಬಾಬುರವರು ಕೇರಳ ರಾಜ್ಯ ದಲ್ಲಿನ ಸಹಕಾರ ಸಂಸ್ಥೆಗಳ ಸ್ಥಿತಿಗತಿಗಳ ಬಗ್ಗೆ ಬೆಳಕು ಚೆಲ್ಲಿದರು. ಕೇರಳ ರಾಜ್ಯ ಸರ್ಕಾರದ ಸಹಕಾರ ಕಾರ್ಯದರ್ಶಿಗಳಾದ ಡಾ.ವಿ.ಎಂ.ಗೋಪಾಲ್ ಮೆನನ್ ಇವರು ಪಂಚವಾರ್ಷಿಕ ಯೋಜನೆಗಳಲ್ಲಿ ಸಹಕಾರ ಕ್ಷೇತ್ರ ಹಾಗೂ ಗ್ರಾಮೀಣ ಭಾರತದಲ್ಲಿ ಸಹಕಾರ ಕ್ಷೇತ್ರದ ಪಾತ್ರ ಇವುಗಳ ಕುರಿತು ವಿವರಿಸಿದರು.

ಕೇರಳ ವಿಭಾಗದ ನಬಾರ್ಡ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಕೆ.ಸಿ. ಶಶಿಧರ ಇವರು ಸಹಕಾರ ಕ್ಷೇತ್ರದ ಮೇಲೆ ವೈದ್ಯನಾಥನ್ ವರದಿ ಉಂಟುಮಾಡಿರುವ ಪರಿಣಾಮಗಳು, ಸಹಕಾರ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲಗಳನ್ನು ಪ್ರಭಾವಿ ಯಾಗಿ ಬಳಸಿಕೊಳ್ಳಬೇಕಾದ ಅವಶ್ಯಕತೆ, ಆಧುನಿಕ ತಂತ್ರಜ್ಞಾನಗಳನ್ನ ಅಳವಡಿಸಿಕೊಳ್ಳುವ ಮೂಲಕ ಇತರೆ ಬ್ಯಾಂಕ್‌ಗಳೊಂದಿಗೆ ಸಹಕಾರ ಸಂಸ್ಥೆಗಳು ಸ್ಪರ್ಧಿಸಬಹುದಾದ ಸಾಧ್ಯತೆಗಳು, ಸಹಕಾರ ಸಂಸ್ಥೆಗಳ ನಡುವೆ ಸಹಕಾರ ಬೆಳೆಸಿಕೊಳ್ಳಬೇಕಾದ ಅನಿವಾರ್ಯತೆಗಳ ಕುರಿತು ವಿವರವಾಗಿ ಮಾಹಿತಿ ಒದಗಿಸಿದರು. ಅಲ್ಲದೇ ಸಹಕಾರ ಕ್ಷೇತ್ರದ ಇತಿಹಾಸದ ಬಗ್ಗೆ ಇದುವರೆಗೆ ತುಂಬಾ ಚರ್ಚೆಗಳು ನಡೆದಾಗಿದೆ ಇನ್ನು ಮುಂದಿನ ಸಾಧ್ಯತೆಗಳೆಡೆಗೆ ನಡೆಯೋಣ ಎಂದು ಕರೆನೀಡಿದರು.

ಆಂದ್ರಪ್ರದೇಶದ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಅರ್ಜುನ ರಾವ್ ಇವರು ಆಂದ್ರಪ್ರದೇಶದಲ್ಲಿನ ಸಹಕಾರ ಕ್ಷೇತ್ರದ ಬಗ್ಗೆ ಮಾಹಿತಿ ಒದಗಿಸಿದರು. ಕೇರಳ ರಾಜ್ಯ ಸಹಕಾರ ಯೂನಿಯನ್ ಅಧ್ಯಕ್ಷರಾದ ಶ್ರೀ ಇ.ನಾರಾಯಣನ್ ಇವರು ಸ್ವಾಗತವನ್ನು ಹಾಗೂ ರಾಷ್ಟ್ರೀಯ ಸಹಕಾರ ಯೂನಿಯನ್ ಮುಖ್ಯನಿರ್ವಾಹಕರಾದ ಡಾ.ದಿನೇಶ್ ವಂದನಾ ರ್ಪಣೆಯನ್ನು ನೆರವೇರಿಸಿದರು. ಉದ್ಘಾಟನಾ ಕಾರ್ಯಕ್ರಮದ ನಂತರ ಸಹಕಾರ ಕ್ಷೇತ್ರದ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ಮೊದಲನೇ ಅವಧಿಯಲ್ಲಿ ದಕ್ಷಿಣ ವಲಯದ ಎಲ್ಲಾ ರಾಜ್ಯಗಳಿಂದ ಒಬ್ಬ ಪ್ರತಿನಿಧಿಗಳು ಮಾತನಾಡಿದರು.

ಎರಡನೇ ಅವಧಿಯಲ್ಲಿ ಕರ್ನಾಟಕದ ಸಹಕಾರ ಕ್ಷೇತ್ರದಲ್ಲಿ ವಿಶೇಷ ಪಾತ್ರ ವಹಿಸಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಕರ್ನಾಟಕ ರಾಜ್ಯ ಸಹಕಾರ ತೋಟಗಾರಿಕಾ ಮಾರಾಟ ಮಹಾಮಂಡಳ, ಬೆಂಗಳೂರು ಇವರಿಗೆ ನೀಡಲಾಗಿತ್ತು. ಸೌಹಾರ್ದ ಸಂಯುಕ್ತ ಸಹಕಾರಿಯಿಂದ ಶ್ರೀಕಾಂತ ಬಿ.ಆರ್. ಇವರು ಮಾತನಾಡಿ ಕರ್ನಾಟಕ ರಾಜ್ಯದಲ್ಲಿ ಸಹಕಾರ ಕ್ಷೇತ್ರ ನಡೆದು ಬಂದ ದಾರಿ, ಪ್ರಸ್ತುತ ಸೌಹಾರ್ದ ಸಹಕಾರಿ ಕ್ಷೇತ್ರ ಪ್ರಭಾವಿಯಾಗಿ ಕಾರ್ಯನಿರ್ವಹಿಸುತ್ತಿರುವ ವಿವರ ಹಾಗೂ ಸ್ವತಂತ್ರ ಕಾಯ್ದೆ ಜಾರಿಯಲ್ಲಿರುವ ರಾಜ್ಯಗಳು ಅಳವಡಿಸಿಕೊಳ್ಳಬಹುದಾದ ಸಂಯುಕ್ತ ಸಹಕಾರಿ ಎಂಬ ಏಕಮಾತ್ರ ಮಾದರಿ ಸಂಸ್ಥೆಯ ಪರಿಕಲ್ಪನೆಯ ಬಗ್ಗೆ ವಿವರಿಸಿದರು. ತೋಟಗಾರಿಕಾ ಮಾರಾಟ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಕಾಂತ ಕೆ ಇವರು ಹಾಪ್‌ಕಾಮ್ಸ್‌ಗಳ ಕಾರ್ಯವಿಧಾನಗಳ ಬಗ್ಗೆ ವಿವರಿಸಿದರು. ಕರ್ನಾಟಕದಲ್ಲಿ ಯಶಸ್ವಿ ಯಾಗಿ ಕಾರ್ಯ ನಿರ್ವಹಿಸುತ್ತಿರುವ ಸ್ವತಂತ್ರ ಸಹಕಾರ ಕಾಯ್ದೆಯಾದ ಸೌಹಾರ್ದ ಕಾಯ್ದೆಯ ಬಗ್ಗೆ ಹಾಗೂ ಇದರ ಯಶಸ್ಸಿನಲ್ಲಿ ಪ್ರಮುಖ ಪಾತ್ರವಹಿಸುತ್ತಿರುವ ಸಂಯುಕ್ತ ಸಹಕಾರಿಯ ಬಗ್ಗೆ ಮೆಚ್ಚುಗೆ ವ್ಯಕ್ತವಾಯಿತು. ಈ ಸಮ್ಮೇಳನದಲ್ಲಿ ಸಂಯುಕ್ತ ಸಹಕಾರಿಯಿಂದ ಸಹಪ್ರಧಾನ ವ್ಯವಸ್ಥಾಪಕರುಗಳಾದ ಶ್ರೀಕಾಂತ ಬಿ. ಆರ್. ಹಾಗೂ ಶ್ರೀ ರಘುನಂದನ ಕೆ. ಇವರು ಪ್ರತಿನಿಧಿಗಳಾಗಿ ಭಾಗವಹಿಸಿದ್ದರು. ಐದು ರಾಜ್ಯಗಳಿಂದ ಒಟ್ಟೂ 70 ಜನ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿ ಸಹಕಾರ ಕ್ಷೇತ್ರದ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡರು.

– **ರಘುನಂದನ ಕೆ.**, ಸಹಪ್ರಧಾನ ವ್ಯವಸ್ಥಾಪಕಕ.ರಾ.ಸೌ.ಸಂ.ಸ.ನಿ., ಬೆಂ.

ಚಿತ್ರದುರ್ಗ, ದಾವಣಗೆರೆಯಲ್ಲಿ ದಿ ಪಾವಗಡ ಕ್ರೆಡಿಟ್ ಕೋ-ಆಪರೇಟಿವ್‌ನ ನೂತನ ಶಾಖೆಗಳ ಆರಂಭ

ಮಾರ್ಚ್ 12 ರಂದು ದಿ ಪಾವಗಡ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ.,ನ 12ನೇ ಶಾಖೆ ಉದ್ಘಾಟನೆ ಚಿತ್ರದುರ್ಗದಲ್ಲಿ ಯಶಸ್ವಿಯಾಗಿ ಜರುಗಿತು. ಕಾರ್ಯಕ್ರಮದಲ್ಲಿ ಚಿತ್ರದುರ್ಗದ ಎಂಎಲ್‌ಸಿ ಶ್ರೀ ತಿಪ್ಪಾರೆಡ್ಡಿ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಶ್ರೀ ಲಕ್ಷ್ಮೀಕಾಂತ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ಎಸ್.ಆರ್. ಲಕ್ಷ್ಮಿಕಾಂತರೆಡ್ಡಿ, ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಭಾಗವಹಿಸಿದ್ದರು.

ಮಾರ್ಚ್ 24ರಂದು ದಿ ಪಾವಗಡ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ.,ನ 13ನೇ ಶಾಖೆ ದಾವಣಗೆರೆಯಲ್ಲಿ ಉದ್ಘಾಟನೆಗೊಂಡಿತು. ತೋಟಗಾರಿಕೆ ಸಚಿವ ಶ್ರೀ ಎಸ್.ಎ.ರವೀಂದ್ರನಾಥ್, ವಿಧಾನ ಪರಿಷತ್ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಬಿಜೆಪಿ ಜಿಲ್ಲಾಧ್ಯಕ್ಷ ಶ್ರೀ ಗುರುಸಿದ್ದನಗೌಡ, ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ಎಸ್.ಆರ್. ಲಕ್ಷ್ಮಿಕಾಂತರೆಡ್ಡಿ, ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಭಾಗವಹಿಸಿದ್ದರು.

ಸುವಿಧಾ ಸಹಕಾರಿಯಿಂದ ಗ್ರಾಹಕರಿಗೆ ವಿವಿಧ ಸೌಲಭ್ಯಗಳು

ಸಾಮಾನ್ಯ ಗ್ರಾಹಕರಿಗೆ ದೈನಂದಿನ ಅವಶ್ಯಕತೆಗಳಾದ ಹಾಲು, ತರಕಾರಿ, ಹಣ್ಣು ದಿನಸಿ, ಕಾಳು ಕಡಿ, ಧವಸಧಾನ್ಯ, ಸ್ಟೇಶನರಿ, ಲೇಖನ ಸಾಮಗ್ರಿ, ಶೌಚೋಪಕರಣಗಳು, ಫ್ಯಾನ್ಸಿ ಐಟಂಗಳು, ಕಿಚನ್‌ವೇರ್, ಆಟಿಕೆಗಳು, ಆಟೋಪಕರಣಗಳು, ತಿಂಡಿ ತಿನಸುಗಳು, ಬೇಕರಿ ತಿನಿಸುಗಳು, ಗೃಹೋಪಯೋಗಿ ವಸ್ತುಗಳು, ಪಶು ಆಹಾರ, ಕೃಷಿ ಪರಿಕರಣಗಳು, ನಿತ್ಯೋಪಯೋಗಿ ಪ್ಲಾಸ್ಟಿಕ್, ಎಲೆಕ್ಟ್ರಾನಿಕ್, ಎಲೆಕ್ಟ್ರಿಕಲ್ ವಸ್ತುಗಳು ದೊರೆಯುತ್ತವೆ.

ವಿಶೇಷತೆಗಳು :

ವರ್ಷದ 365 ದಿನಗಳ ವಹಿವಾಟು ಇರುತ್ತದೆ. ಬೆಳಗ್ಗೆ 7–00 ರಿಂದ ರಾತ್ರಿ 9–00ರವರೆಗೆ ತಡೆರಹಿತ ವ್ಯಾಪಾರ.

ತೂಕ ಗುಣಮಟ್ಟ ಗ್ಯಾರಂಟಿ ಹಾಗೂ ಕಡಿಮೆದರದಲ್ಲಿ ವಸ್ತುಗಳು ಲಭ್ಯ. ಶುಚಿ ಹಾಗೂ ಪ್ಯಾಕ್ ಮಾಡಿದ ವಸ್ತುಗಳು. ತೆರಿಗೆ ಸಹಿತ ಬಿಲ್ಲಿಂಗ್ ವ್ಯವಸ್ಥೆ. ಸಿಸಿ.ಟಿ.ವಿ.ಹಾಗೂ ಸೆಕ್ಯುರಿಟಿ, ಗಣಕೀಕೃತ ಕೌಂಟರ್‌ಗಳನ್ನು ಹೊಂದಿದೆ.

ಸುವಿಧಾ ಸ್ವಾದ, ಸುವಿಧಾ ಚಾಟ್ಸ್ ಹಾಗೂ ಸುವಿಧಾ ಜೂಸ್ ಝೋನ್ ಪ್ರಾರಂಭ

ಯುಗಾದಿ ಉತ್ಸವದ ಆಚರಣೆ ದಿನದಂದು ಸುವಿಧಾ ಸ್ವಾದ ಸುವಿಧಾ ಚಾಟ್ಸ್ ಹಾಗೂ ಸುವಿಧಾ ಜೂಸ್ ಝೋನ್ ಪ್ರಾರಂಭಿಸಲಾಗಿದೆ. ನ್ಯೂಡಲ್ಸ್, ಸ್ಯಾಂಡ್‌ವಿಚ್, ಐಸ್‌ಕ್ರೀಂ ಹಾಗೂ ರುಚಿ ಶುಚಿಯಾದ ಆಹಾರಗಳು, ಪಾನಿಪೂರಿ, ಗೋಬಿ ಮಂಚೋರಿ, ಕಾರ್ನ್ಸ್, ಮುಂತಾದ ಸವಿ ತಿಂಡಿಗಳು, ಕಬ್ಬಿನ ಹಾಲು, ಎಳೆನೀರು, ಹಣ್ಣಿನ ರಸಗಳು, ಲಸ್ಸಿ, ವಿವಿಧ ದೇಸಿ ಪಾನೀಯಗಳು ಗ್ರಾಹಕರ ಹಾಗೂ ಸಾರ್ವಜನಿಕರ ಸೇವೆಗಾಗಿ ಲಭ್ಯವಿವೆ. ಸಹಕಾರ ಕ್ಷೇತ್ರದಲ್ಲಿ ಅದೂ ಕರ್ನಾಟಕದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಇದೊಂದು ಅಪೂರ್ವ ಸಾಧನೆ ಇತರರಿಗೆ ಮಾದರಿ ಎಂದು ಹೇಳಬಹುದು.

member participation and less Government intervention inn the affairs of the Co-operatives.

KSS Act, 1997 Main Features :

The Features of KSS Act, 1997 :

- Self formation with likeminded persons.
- Self regulation/control.
- No Government intervention except for few things.
- Audit by empanelled Chartered Accountants/ Auditors.
- Auditors' appointment at General Body.
- It has 72 Sections along with Sub Sections.

Federal Co-operative :

Karnataka State Souharda Federal Co-operative Limited (KSSFCL). It is formed by KSS Act, 1997 on 04.01.2002 and it has Head Office at Bangalore and Divisional Offices at Belgaum and Gulbarga. Sri Sateeshchandra is the present President and Sri Gurunath Janthikar is the present Vice-President. It has representative Directors from all the Districts. The KSSFCL is working with dual concept of welfare as well as regulation of Member Co-oepratives. Membership with KSSFCL is a mandatory for those Co-operatives who get registered under KSS Act, 1997. At present it has a membership of more than 2000 Co-operatives. It will grow fast and may reach any level. With that our opportunity will also increase accordingly. As per the provisions of the Act, the KSSFCL empanels Chartered Accountants to audit the Books of Accounts of Member Co-operatives. Apart from the professional qualification, attending the review meetings like this is one of the basic conditions for empanelment. Every year it will be reviewed, additions and deletions will be made to list of empanelled CAs.

Audit under KSS Act, 1997 :

Co-operative Audit is slightly different from the regular corporate audits. The main things that are relevant while conducting audit under the said Act are:

- K S S Act, 1997.
- K S S Rules, 2004.
- Bye-laws of the Co-operatives.
- Federal Co-operative guidelines.
- Sub rules formed by the Co-operatives.
- RBI Guidelines/ Circulars incase of Co-operative Banks.
- Provisions of other Acts like Income Tax, Service Tax, PF, PT, Labour Act, etc.

- F.C.A. Madhukar Hegde, Bangalore

ಬೀದರ್ ಜಿಲ್ಲಾ ಔರಾದ್ ತಾಲ್ಲೂಕಿನ ಕಮಲ ನಗರದಲ್ಲಿ ಉದಯ ಪತ್ತಿನ ಸೌಹಾರ್ದ ಸಹಕಾರಿಯ ಉದ್ಘಾಟನೆ: ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ್ ಹಾಗು ಬೀದರ್ ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಶ್ರೀ ಉಮಾಕಾಂತ್ ನಾಗಮಾರಪಲ್ಲಿ ಮತ್ತು ಸಹಕಾರಿಯ ನಿರ್ದೇಶಕರುಗಳು ಇದ್ದಾರೆ.

ಸ್ನೇಹ ಪತ್ತಿನ ಸೌಹಾರ್ದ ಸಹಕಾರಿ ಬಸವ ಕಲ್ಯಾಣ ಉದ್ಘಾಟನಾ ಸಮಾರಂಭ ಯಶಸ್ವಿಯಾಗಿ ಜರುಗಿತು. ಈ ಸಂದರ್ಭದಲ್ಲಿ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಶ್ರೀ ಗುರುಸಾದಪ್ಪ ನಾಗಮಾರಪಲ್ಲಿ, ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತೀಕರ್, ಸಹಕಾರಿಯ ಅಧ್ಯಕ್ಷ ಶ್ರೀ ಮಾರುತಿ ರಾವ್ ಮುಳೆ ಇತತರಿದ್ದರು.

Chartered Accountants and Souharda Audit

Most of the banks are under core banking and hence branch audit may not find merit in future. So, members may have to look out for other avenues to grow in profession. The Co-operative sector is one such avenues that the members may make use of.

There is a tremendous opportunity waiting to be explored in the field of Co-operative sector. With the recent developments in bank audits, the branch audits of banks may be discontinued in a phased manner. The audits of banks will be carried out at HO level and there is possibility of that the concurrent auditors will be asked to certify the balance sheet at branch levels. Most of the banks are under core banking and hence branch audit may not find merit in future. So, members may have to look out for other avenues to grow in profession. The Co-operative sector is one such avenues that the members may make use of. We can explore this opportunity by updating ourselves.

Co-operative structure :

There are three types of Co-operative societies as far as their constitution is concerned.

One at centre level i.e., Multi State Co-operative Societies Act, 2002 and other 2 are at State level. At State level we have State Co-operative Societies Act and another one is Liberal Act.

In Karnataka, we have Karnataka Souharda Sahakari Act, 1997 which is one of the Liberal Acts. Apart from Karnataka we have Liberal Acts in eight States outside Karnataka. They are:

1. Andhra Pradesh Mutually Aided Co-operative Act, 1995.
2. Bihar Self Supporting Co-operatives Act, 1996.
3. Jharkhand Self Supporting Co-operatives Act, 1996.
4. Jammu & Kashmir Self Reliant Co-operatives Act, 1999.
5. Madhya Pradesh Autonomous Co-operatives, 1999.
6. Chattisgarh Autonomous Co-operatives, 1999.
7. Orissa Self Help Co-operatives Act, 2001.
8. Uttaranchal Self Reliant Co-operatives Act, 2003.

Apart from this at centre level we have Rural Producer Companies Law, 2002.

Co-operative Societies in Karnataka :

Apart from Central Act, we have two Acts in Karnataka State i.e., Karnataka Co-operative Societies Act, 1959 popularly known as KCS Act and another one is Karnataka Souharda Sahakari Act, 1997 popularly known as K S S Act, 1997 or Souharda Act.

Karnataka has a long history of Co-operative Movement, as the official Co-operative Movement started way back in 1905 and the Karnataka State has the distinction of starting the first agricultural credit Co-operative Society in India. That was started in the year 1905 in a small village called Kanaginahala in Gadag District. Over the years Karnataka has contributed immensely for the Development of Co-operative Sector.

History of Liberal Acts :

After Independence crores of rupees were spent by the Government to popularize and make the Co-operative Movement a successful venture. However, the Central Planning Commission realized that the Co-operative Movement was not successful and funds invested went in vain. The Ardhanarishwaran Committee was formed in the year 1987 to look into the reason for this failure. The said Committee came out with a report stating that the Co-operative Movement failed in the Country due to high intervention by the Government in the affairs of the Co-operative Societies. To overcome this adverse feature, a Commission under the Chairmanship of Sri Brahmaprakash Choudhary was formed and the said Commission came out with Model Co-operaitve Act in 1991. The Central Government circulated this Model Act to all the States with the suggestion to incorporate features of the said Act as it gives more power to the members, more

ಸಿಬ್ಬಂದಿಯವರು ನಿರ್ಭೀತಿಯಿಂದ ಸದಾ ಪ್ರಸನ್ನ ಚಿತ್ತರಾಗಿ ಕಾರ್ಯನಿರ್ವಹಿಸಬೇಕು – ಶ್ರೀ ಎಸ್. ಆರ್. ಸತೀಶ್‌ಚಂದ್ರ

ಸರಸ್ವತಿ ಪತ್ತಿನ ಸೌಹಾರ್ದ ಸಹಕಾರಿಯ ವಾರ್ಷಿಕ ಕ್ರಿಯಾಯೋಜನ ಸಭೆ

ಪುತ್ತೂರಿನ ಶ್ರೀ ಸರಸ್ವತಿ ಸೌಹಾರ್ದ ಸಹಕಾರಿಯ ವಾರ್ಷಿಕ ಕ್ರಿಯಾಯೋಜನೆ ಸಿದ್ಧತೆಗಾಗಿ ಸಹಕಾರಿಯ ಆಡಳಿತ ಮಂಡಳಿಯ ಹಾಗೂ ಸಿಬ್ಬಂದಿಗಳ ಸಭೆ ಕೊಡಗಿನ ಕ್ಯಾಪಿಟಲ್ ವಿಲೇಜ್‌ನಲ್ಲಿ ನಡೆದು 2011–12 ನೇ ಸಾಲಿನ ಆರ್ಥಿಕ ಪ್ರಗತಿಯ ಸಿಂಹಾವಲೋಕನೆ ಹಾಗೂ 2012–13 ನೇ ಸಾಲಿನ ಆರ್ಥಿಕ ಕಾರ್ಯಕ್ರಮಗಳ ಕ್ರೀಯಾ ಯೋಜನೆಯನ್ನು ಸಿದ್ಧಪಡಿಸಿತು.

ಕಾರ್ಯಕ್ರಮದ ಉದ್ಘಾಟಿಸಿ ಮಾತನಾಡಿದ ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಶ್ರೀ ಎಮ್.ಪಿ.ಮುತ್ತಪ್ಪನವರು, ತರಬೇತಿ ನಿರಂತರವಾಗಿರಬೇಕು. ಸಿಬ್ಬಂದಿಯೇ ಸಂಘದ ಆಸ್ತಿ. ಈ ರೀತಿ ನಿರ್ದೇಶಕರು ಹಾಗೂ ಆಡಳಿತ ಮಂಡಳಿ ಸದಸ್ಯರೆಲ್ಲ ಸೇರಿ ಸಹಕಾರಿಯ ಕ್ರೀಯಾಯೋಜನೆಯನ್ನು ಸಿದ್ಧಪಡಿಸುವ ವ್ಯವಸ್ಥೆ ಒಂದು ಉತ್ತಮ ಸಂಪ್ರದಾಯ ಈ ವ್ಯವಸ್ಥೆಯನ್ನು ರಾಜ್ಯದ ಎಲ್ಲ ಸಹಕಾರ ಸಂಸ್ಥೆಗಳು ಅಳವಡಿಸಿಕೊಂಡಲ್ಲಿ ಸಹಕಾರ ಕ್ಷೇತ್ರ ಉತ್ತಮವಾಗಿ ಬೆಳೆಯಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಡಿಕೇರಿ ಜನತಾ ಬಜಾರಿನ ಅಧ್ಯಕ್ಷ ಶ್ರೀ ರವಿ ಬಸಪ್ಪ, ಕೊಡಗು ಜಿಲ್ಲಾ ವಿದ್ಯಾ ಇಲಾಖಾ ನೌಕರರ ಪತ್ತಿನ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶ್ರೀಮತಿ ಮುತ್ತಮ್ಮ ನವರು ಮಾತನಾಡಿ ಶ್ರೀ ಸರಸ್ವತಿ ಸೌಹಾರ್ದ ಸಹಕಾರಿಯ ಅಭಿವೃದ್ಧಿಗೆ ಶುಭ ಹಾರೈಸಿದರು

ಪ್ರಾರಂಭದಲ್ಲಿ ಸಹಕಾರಿಯ ನಿರ್ದೇಶಕ ರಾದ ಶ್ರೀ ಸುನೀಲ್ ಬೋರಕರ್‌ರವರು ಗಣ್ಯರನ್ನು ಹಾರ್ದಿಕವಾಗಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿ ಸರಸ್ವತಿ ಸೌಹಾರ್ದಕ್ಕೆ 8 ಶಾಖೆಗಳಿದ್ದು, 68 ಸಿಬ್ಬಂದಿಯನ್ನು ಹೊಂದಿರುತ್ತದೆ. ಪ್ರತಿವರ್ಷ ನಮ್ಮ ಸಹಕಾರಿಯ ಮುಂಬರುವ ಸಾಲಿನ ಆಯವ್ಯಯ ಸಿದ್ಧಪಡಿಸುವುದಕ್ಕಾಗಿ ಪ್ರತಿ ವರ್ಷ ಈ ರೀತಿ ಸಭೆಯನ್ನು ನಡೆಸುತ್ತ

ಬಂದಿದೆ. ಪ್ರಸ್ತುತ ನಮ್ಮ ಸಹಕಾರಿಯಲ್ಲಿ 10,044 ಸದಸ್ಯರಿದ್ದಾರೆ.

58 ಲಕ್ಷ ಷೇರು ಬಂಡವಾಳವಿದೆ. 42 ಕೋಟಿ ರೂ.ಗಳ ಠೇವಣಿಯಿದೆ. 36 ಕೋಟಿ ರೂಗಳ ಸಾಲ ನೀಡಿದೆ.44 ಕೋಟಿ ರೂಗಳ ದುಡಿಯುವ ಬಂಡವಾಳ ಇದೆ. 58 ಲಕ್ಷ ರೂಗಳ ಲಾಭ ಗಳಿಸಿದ್ದೇವೆ ಎಂದು ತಿಳಿಸಿ, ಸರಸ್ವತಿ ಸೌಹಾರ್ದ ತರಬೇತಿಗೆ ಹೆಚ್ಚಿನ ಆದ್ಯತೆ ನೀಡುತ್ತ ಬಂದಿದ್ದೇವೆ ಎಂದು ತಿಳಿಸಿದರು.

ನಂತರ ದಿಕ್ಸೂಚಿ ಭಾಷಣ ಹಾಗೂ ಸಮಾ ರೋಪ ಭಾಷಣ ಮಾಡಿದ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರರವರು ಮಾತನಾಡಿ ಸಿಬ್ಬಂದಿವರ್ಗದವರು ನಿರ್ಭೀತಿಯಿಂದ ಕಾರ್ಯನಿರ್ವಹಿಸಬೇಕೆಂದು ತಿಳಿಸಿದರು.

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹ ಕಾರಿಯು ಕಳೆದ ಹತ್ತು ವರ್ಷಗಳ ಸಾಧನೆಗೆ ಶ್ರಮಿಸಿದ ಆಡಳಿತ ಮಂಡಳಿ, ಸಿಬ್ಬಂದಿವರ್ಗ ಹಾಗೂ ಎಲ್ಲ ಸದಸ್ಯ ವರ್ಗದವರನ್ನು ಅಭಿನಂಧಿಸಿದರು. ಸರಸ್ವತಿ ಸೌಹಾರ್ದ ಸಹಕಾರಿಯು ರಾಜ್ಯದಲ್ಲಿ ಪ್ರಪ್ರಥಮ ಉತ್ತಮ ಆರ್ಥಿಕ ಸಂಘಟನೆಯಾಗಿ ಬೆಳೆಯ ಬೇಕಾಗಿದೆ. ಅದಕ್ಕಾಗಿ ನಮ್ಮೆಲ್ಲರಲ್ಲಿರುವ ಸುಪ್ತ ಶಕ್ತಿಯನ್ನು ಜಾಗೃತಗೊಳಿಸಬೇಕಿದೆ (WE HAVE TO UNLEASH OUR POTETIALITY IN BETTER MANNER). ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಕಾರ್ಯ ನಿರ್ವಹಿಸುವ ಅನಿವಾರ್ಯತೆ ಇದೆ. ಮುಂಬರುವ ವರ್ಷದಲ್ಲಿ 88 ಕೋಟಿ ರೂ.ಗಳ ಡಿಪಾಸಿಟ್ ಸಂಗ್ರಹಣೆ, 72 ಕೋಟಿ ರೂ.ಗಳ ಸಾಲ ನೀಡುವಿಕೆ 15,500 ಎಸ್ ಬಿ. ಖಾತೆಗಳನ್ನು ಹೊಂದುವುದು ಹಾಗೂ 13,000 ಸದಸ್ಯರನ್ನು ಹೊಂದುವುದರ ಜೊತೆಗೆ 100% ಬೆಳವಣಿಗೆಯ ಗುರಿಯನ್ನು ಹೊಂದಿದೆ ಎಂದು ಘೋಶಿಸಿದರು. ಮಣಿಪಾಲ್, ಸೂರತ್ಕಲ್ ಹಾಗೂ ಸಕಲೇಶಪುರಗಳಲ್ಲಿ ಶಾಖೆಗಳನ್ನು ತೆರೆಯುವ ಉದ್ದೇಶ ಹೊಂದಿದೆ ಎಂದು ತಿಳಿಸಿದರಲ್ಲದೆ, ಕಳೆದ ಸಾಲಿನಲ್ಲಿ 96% ಬೆಳವಣಿಗೆಗೆ ಶ್ರಮಿಸಿದ ಎಲ್ಲ ಶಾಖೆಗಳ ಸಿಬ್ಬಂದಿಯವರಿಗೆ ಶಾಖಾವಾರು ನಗದು ಬಹುಮಾನವನ್ನು ಘೋಷಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಎಲ್ಲ ಆಡಳಿತ ಮಂಡಳಿ ಎಲ್ಲ ಸದಸ್ಯರು ಹಾಗೂ ಎಲ್ಲ ಸಿಬ್ಬಂದಿಯವರು ಭಾಗವಹಿಸಿದ್ದರು. ಶ್ರೀ ವಿನಯಚಂದ್ರ ಮಾಜಿ ಎಂಎಲ್‌ಎಯವರು ವೃತ್ತಿ–ಪ್ರವೃತ್ತಿ ವಿಷಯದ ಬಗ್ಗೆ, ಶ್ರೀ ಹೆಚ್ ಮುರಳಿಧರ್‌ರವರು ವ್ಯಕ್ತಿತ್ವ ವಿಕಸನದ ಬಗ್ಗೆ ಉಪನ್ಯಾಸಗಳನ್ನು ನೀಡಿದರು. ■

ಸಾಲ ಸೌಲಭ್ಯ ಸದುಪಯೋಗದಿಂದ ಜನತೆ ಅಭಿವೃದ್ಧಿ

ಬ್ಯಾಂಕ್‌ನಿಂದ ಪಡೆದ ಸಾಲ ಸೌಲಭ್ಯ ಸದುಪಯೋಗ ಪಡಿಸಿಕೊಂಡಾಗ ಮಾತ್ರ ಜನತೆ ಅಭಿವೃದ್ಧಿ ಹೊಂದಲು ಸಾಧ್ಯ ಎಂದು ಹಗರಿಬೊಮ್ಮನಹಳ್ಳಿ ಶಾಸಕ ಶ್ರೀ ಕೆ. ನೇಮಿರಾಜ ನಾಯ್ಕ ಹೇಳಿದರು. ಪಟ್ಟಣದ ಕೂಡ್ಲಿಗಿ ವೃತ್ತದ ಬಳಿ ಗಿರಿ ಪತ್ತಿನ ಸೌಹಾರ್ದ ಸಹಕಾರ ಬ್ಯಾಂಕ್‌ನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಹುಬ್ಬಳ್ಳಿ ಹಾಗೂ ಕಾಲ್ವಿ ತಾಂಡದ ಬಂಜಾರ ಗುರುಪೀಠದ ಶ್ರೀ ತಿಪ್ಪೇಶ್ವರ ಮಹಾ ಸ್ವಾಮೀಜಿ, ಶ್ರೀ ಹಾಲಶಂಕರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಬ್ಯಾಂಕಿನ ಮುಖ್ಯ ಪ್ರವರ್ತಕ ಶ್ರೀ ಎಸ್. ಗೋಪಿನಾಯ್ಕ ಅಧ್ಯಕ್ಷತೆ ವಹಿಸಿದ್ದರು.

ಹಿರಿಯ ಮುಖಂಡ ಶ್ರೀ ಆರ್. ರಾಮನ ಗೌಡ್ರು. ಜಿ.ಪಂ. ಸದಸ್ಯೆ ಶ್ರೀಮತಿ ಹೇಮ್ಲವ್ವ

ಕೃಷ್ಣಾನಾಯ್ಕ, ಹೊಸಪೇಟೆ ಉಪ ವಿಭಾಗದ ಸಹಕಾರಿ ಸಹಾಯಕ ನಿಬಂಧಕರು ಡಾ.ಜಿ. ಉಮೇಶ್, ತಾ.ಪಂ. ಮಾಜಿ ಅಧ್ಯಕ್ಷ ಶ್ರೀ ಪಿ.ಸೂರ್ಯಬಾಬು, ಸಹಕಾರಿ ಸಂಘಗಳ ನಿರೀಕ್ಷಕ ಶ್ರೀ ಕೃಷ್ಣಾನಾಯ್ಕ, ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಎಸ್. ಈ. ಸುರೇಶ್, ವ್ಯವಸ್ಥಾಪಕ ಶ್ರೀ ಗಿರೀಶ್ ರಾಥೋಡ್, ನಿರ್ದೇಶಕರು ಮತ್ತು ಆಡಳಿತ ಮಂಡಳಿಯ ಸರ್ವ ಸದಸ್ಯರು ಉಪಸ್ಥಿತರಿದ್ದರು. ಟಿ.ಜಿ.ಎಮ್. ಕೊಟ್ರೇಶ್ ನಿರೂಪಿಸಿದರು. ನಿವೃತ್ತ ಶಿಕ್ಷಕ ಶ್ರೀ ಜೆ. ಪ್ರಹ್ಲಾದ್ ಸ್ವಾಗತಿಸಿದರು. ಶ್ರೀ ಅಶೋಕ ಉಪ್ಪಾರ ವಂದಿಸಿದರು.

ವಿವಿಧ ಸಹಕಾರಿಗಳಿಗೆ ನೂತನ ಪದಾಧಿಕಾರಿಗಳ ಆಯ್ಕೆ

ವಿಜ್ಞಾನೇಶ್ವರ ಸೌಹಾರ್ದ ಸಹಕಾರಿ ನಿ., ಗುಲ್ಬರ್ಗಾ

ನ್ಯಾ. ಡಾ. ಎಂ. ರಾಮಾ ಜೋಯಿಸ್
ಅಧ್ಯಕ್ಷರು,
ರಾಜ್ಯಸಭಾ ಸದಸ್ಯರು.

ಡಾ. ಬಸವರಾಜ ಪಾಟೀಲ ಸೇಡಂ
ಉಪಾಧ್ಯಕ್ಷರು,
ರಾಜ್ಯಸಭಾ ಸದಸ್ಯರು.

ಶ್ರೀ ಬಸವೇಶ್ವರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪಳ

ಶ್ರೀ ವೀರಣ್ಣ ಗುರುಸಿದ್ದಪ್ಪ
ಸಂಕ್ಲಾಪುರ,
ಅಧ್ಯಕ್ಷರು

ಶ್ರೀ ಬಸವರಾಜ ಸಂಗಪ್ಪ
ನೀರಲಗಿ
ಉಪಾಧ್ಯಕ್ಷರು

ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ

ಶ್ರೀ ಎಸ್.ಆರ್.
ಲಕ್ಷ್ಮೀಕಾಂತ ರೆಡ್ಡಿ
ಅಧ್ಯಕ್ಷರು

ಶ್ರೀ ಪಿ.ಎಲ್.
ಸುರೇಶ್ ರಾಜು
ಉಪಾಧ್ಯಕ್ಷರು

ಆದರ್ಶ ಸೌಹಾರ್ದ ಪತ್ತಿನ ಸಹಕಾರಿ ನಿ., ಸಭೆ ಯಶಸ್ವಿ

ಆದರ್ಶ ಪತ್ತಿನ ಸೌಹಾರ್ದ ಸಹಕಾರಿ ಯಲ್ಲಿ ದಿ: 3/3/2012 ರಂದು, ಅನೇಕ ಸೌಹಾರ್ದ ಸಹಕಾರಿಗಳ, ಸಭೆ ಜರುಗಿತು. ಈ ಮಹತ್ವವಾದ ಸಭೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀ ಕರ್ ಉಪಸ್ಥಿತರಿದ್ದರು. ನಮ್ಮ ಎಲ್ಲ ಸಹಕಾರಿ ಗಳಿಗೆ ಆದಾಯ ತೆರಿಗೆ (Income Tax) ಬಗ್ಗೆ ಮಾಹಿತಿ ನೀಡಿದರು.ಆದಾಯ ತೆರಿಗೆ ಅಧಿಕಾರಿಗಳಿಂದ ಬಂದ ನೋಟಿಸ್ ಪರಿಶೀಲಿಸಿ ಅವುಗಳಿಗೆ ಸೂಕ್ತವಾದ ಉತ್ತರ

ನೀಡಲು ಮಾಹಿತಿ ನೀಡಿದರು. ಮತ್ತು ಕೆಲವು ಅಧಿಕಾಗಳು ಕೊಡುವ ಕಿರಿಕಿರಿಗಳ ಬಗ್ಗೆ ಚರ್ಚಿಸಲಾಯಿತು. ನಮಗೆಲ್ಲ ಉತ್ತಮ ಮಾರ್ಗದರ್ಶನ ನೀಡಿ ಭಯ ಪಡದೆ ಮುಂದುವರಿಯಲು ತಿಳಿಸಿದರು.

ಈ ಸಂದರ್ಭದಲ್ಲಿ ಪ್ರಮುಖವಾಗಿ ಆದರ್ಶ ಪತ್ತಿನ ಸೌಹಾರ್ದ ಸಹ ಕಾರಿಯ ಸಂಸ್ಥಾಪಕರಾದ ಶ್ರೀ ಸಂಗಣ್ಣ ಕರಡಿಯವರು ಎಲ್ಲರ ಪತಿಯಿಂದ ಶ್ರೀ ಗುರುನಾಥ ಜ್ಯಾಂತೀಕರ್‌ರವರನ್ನು ಸನ್ಮಾನಿಸಿ ಸಂದರ್ಭದಲ್ಲಿ ಶ್ರೀ ಅಮರನಾಥ ಬಿರಾದಾರ, ಶ್ರೀ ಉಮ್ಮಣ್ಣನವರು, ಶ್ರೀ ಸಿದ್ದಣ್ಣ ಉಪ್ಪಿನ, ಸಿದ್ದು ಶಾಲಿಮುಂಗಿ, ಶ್ರೀ ಶಿವಾನಂದ ಕೊಟಗಿ, ಶ್ರೀ ಬಾವಿಕಟ್ಟಿ, ಶ್ರೀ ಊ.ಓ. ಬಸನಾಳ ಮುಂತಾದವರು ಹಾಜರಿದ್ದರು.

Clarification Regarding Execution of Loan Agreement

ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ

Question No.1) yes., Loan agreements should be executed by Stamp Paper. Article 6 of the Karnataka Stamp Act-1957 deals with the Agreement relating to deposit of title deeds,(pawn or pledge), that is to say, any instrument evidencing an agreement relating to-

(1) The deposit of title deeds or instruments constituting or being evidence of the title to any property whatever (other than a marketable security), where such deposit, has been made by way of security for the repayment of money advanced or to be advanced by way of loan or an existing or future debt;

If such case fees are 0.1 percent on the loan or debt amount subject to a maximum of

Rs.50,000/- but not less then Rs.500/-

(2) The (pawn or pledge) of moveable property, where such (pawn or pledge) has been made by way of security for the repayment of money advanced or to be advanced by way of loan or an existing or future debt;

(a) If such loan or debt is repayable not more than three months from the date of such instruments:

In such case fees are twenty five paisa for every hundred rupees or part thereof;

(b) If such loan or debt is repayable on demand for more than three months from the date of instrument evidencing the agreement;

In such case fees are fifty paisa for every hundred rupees or part thereof subject to a maximum of rupees two lakhs;

Exemption:

1. Instruments of pawn or pledge or jewels wherein such loan or debt is upto Rupees ten thousand.
2. Instruments of pawn or pledge of goods, if unattested.

Question No.2) Normally, the term of the loan has been prescribed in the loan agreement. Hence renewal of the agreement not required. In prevalent Banking practice Overdraft agreement will be renewed every three years.

ಪ್ರಶ್ನೆ : ಜಿಲ್ಲಾ ಸಹಕಾರ ಬ್ಯಾಂಕ್‌ಗಳ ಸದಸ್ಯತ್ವ ಪಡೆಯಲು ಸಂಯುಕ್ತ ಸಹಕಾರಿಯ ಅನುಮತಿ ಅಗತ್ಯವೇ?

ಉತ್ತರ : ಸಹಕಾರಿಗಳ ಸಂಯುಕ್ತ ನಿಬಂಧಕರು ತಮ್ಮ ಪತ್ರ ಸಂಖ್ಯೆ:ಆರೆಸಾರ್/ಸೌಕಾ/164/ಎಕ್ಸ್‌ಎಂಸಿ/2003–04, ದಿನಾಂಕ : 06–12–2003ರಂದು ಮತ್ತು ಸಹಕಾರಿಗಳ ನಿಬಂಧಕರು ಸುತ್ತೋಲೆ ಸಂ:ಆರ್‌ಎಸ್‌ಆರ್/ಎಕ್ಸ್‌ಎಂಸಿ /33/11–12 ದಿನಾಂಕ : 16–06–2012ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಸೌಹಾರ್ದ ಕಾಯ್ದೆಯಡಿಯಲ್ಲಿ ನೋಂದಣಿಯಾದ ಸಹಕಾರಿಗಳಿಗೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಲ್ಲಿ ಸದಸ್ಯತ್ವ ನೀಡಲಾಗುತ್ತಿದೆ. ಸುತ್ತೋಲೆಯಳನ್ನು ಸಂಬಂಧಿಸಿದವರ ಗಮನಕ್ಕೆ ತರುವುದರ ಮೂಲಕ ಸದಸ್ಯತ್ವ ಪಡೆಯಬಹುದಾಗಿದೆ.

ಪ್ರಶ್ನೆ : ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಹಕಾರಿಯ ಖಾತೆಯನ್ನು ತೆರೆಯಲು ಸಂಯುಕ್ತ ಸಹಕಾರಿಯ ಅನುಮತಿ ಅವಶ್ಯಕವೆ?

ಉತ್ತರ : ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಹಕಾರಿಯ ಖಾತೆಯನ್ನು ತೆರೆಯಲು ಯಾವುದೇ ರೀತಿಯ ಅನುಮತಿ ಅವಶ್ಯಕತೆ ಇರುವುದಿಲ್ಲ.

ಪ್ರಶ್ನೆ : ಸೌಹಾರ್ದ ಸಹಕಾರಿಯ ಲೆಕ್ಕಪರಿಶೋಧಕರನ್ನು ಯಾರು ನೇಮಿಸುತ್ತಾರೆ.

ಉತ್ತರ : ಸೌಹಾರ್ದ ಸಹಕಾರಿಯ ಲೆಕ್ಕಪರಿಶೋಧಕರನ್ನು ನೇಮಿಸುವ ಅಧಿಕಾರ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಗೆ ಇರುತ್ತದೆ.

ಪ್ರಶ್ನೆ : ನಿಗದಿತ ಸಮಯದೊಳಗೆ ಲೆಕ್ಕ ಪರಿಶೋಧನೆ ಮಾಡಿಸದಿದ್ದಾಗ ಸಂಯುಕ್ತ ಸಹಕರಿಯ ಮುಂದಿನ ಕ್ರಮವೇನು?

ಉತ್ತರ : ಸೌಹಾರ್ದ ಕಾಯ್ದೆ ಕಲಂ 33(7) ರಡಿಯಲ್ಲಿ ಒಂದು ವೇಳೆ ಉಪವಿಧಿಗಳಲ್ಲಿ ಗೊತ್ತುಪಡಿಸಲಾದ ಸಮಯದೊಳಗೆ ಸಹಕಾರಿಯು ತನ್ನ ವಾರ್ಷಿಕ ಲೆಕ್ಕ ಪತ್ರಗಳ ಲೆಕ್ಕಪರಿಶೋದನೆ ನಡೆಸಲು ತಪ್ಪಿದಲ್ಲಿ ಸಂಯುಕ್ತ ಸಹಕಾರಿಯು ಲೆಕ್ಕಪರಿಶೋಧಕರ ನೇಮಕಾತಿ ಮಾಡಿ ಸಹಕಾರಿಯ ಲೆಕ್ಕಪರಿಶೋಧನೆ ಮಾಡಿಸಲು ಕ್ರಮವಿಡಬೇಕಾಗುತ್ತದೆ. ಅಂತಹ ಲೆಕ್ಕಪರಿಶೋಧನೆ ವೆಚ್ಚವನ್ನು ಸಂಬಂಧಿಸಿದ ಸಹಕಾರಿಯು ಭರಿಸಬೇಕು.

ಬಾಗಲಕೋಟ ಜಿಲ್ಲಾ ಜಮಖಂಡಿ ತಾಲ್ಲೂಕು ಶ್ರೀ ಪ್ರಭುಲಿಂಗೇಶ್ವರ ಸೌಹಾರ್ದ ಸಹಕಾರಿಯಲ್ಲಿ ನಡೆದ ವಿಶೇಷ ತರಬೇತಿ ಕಾರ್ಯಕ್ರಮ.

ಹಿರಿಯ ಸಹಕಾರಿ ಎಂ.ವಿ.ಹಡಗಲಿ ವಿಧಿವಶ!

ಹಿರಿಯ ಸಹಕಾರಿ ದುರೀಣ, 70 ವರ್ಷ ವಯಸ್ಸಿನ ಎಂ.ವಿ.ಹಡಗಲಿ ವಿಧಿವಶವಾಗಿದ್ದಾರೆ. ಜನಪರ ಸಂಘಟನೆಗಳೊಂದಿಗೆ ಕ್ರೀಯಾಶೀಲವಾಗಿ ಗುರುತಿಸಿಕೊಂಡಿದ್ದು, ಅನೇಕ ಸಂಘಟನೆಗಳ ಹುಟ್ಟು, ಬೆಳವಣಿಗೆಗೆ ಕಾರಣವಾಗಿದ್ದರು. ಶಿಕ್ಷಣ ಸಂಸ್ಥೆ, ಸಹಕಾರಿ ಸಂಸ್ಥೆಗಳನ್ನು ಆರಂಭಿಸುವ ಮೂಲಕ ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಿಗದ್ದರು. ಕೃತಿಕಾ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿ, ಮಿತ್ರ ಪತ್ತಿನ ಸೌಹಾರ್ದ ಸಹಕಾರಿಯ ಸಂಸ್ಥಾಪಕರಾಗಿ ಅನೇಕ ಸಹಕಾರಿಗಳಿಗೆ ಮಾರ್ಗದರ್ಶಕರಾಗಿದ್ದರು. ಸಹಕಾರಿಯ ಎಲ್ಲಾ ಸದಸ್ಯರು ಗಣ್ಯರ ನಿಧನಕ್ಕೆ ಶೋಕ ವ್ಯಕ್ತಪಡಿಸಿದ್ದಾರೆ.

ಸಾಲ ಮತ್ತು ಮುಂಗಡಗಳನ್ನು ನೀಡುವ ವಿಧಾನಗಳು

ಸೌಹಾರ್ದ ಸಹಕಾರಿಗಳು ನೀಡುವ ಸಾಲಗಳ ಬಗ್ಗೆ ತಿಳುವಳಿಕೆ ನೀಡುವ ದೃಷ್ಟಿಯಿಂದ ಈ ಲೇಖನ ಪ್ರಕಟಿಸಲಾಗಿದೆ

...ಕಳೆದ ಮಾರ್ಚ್ ಸಂಚಿಕೆಯಿಂದ

2) ಜಾಮೀನು ಸಾಲ (ಕಂತುಗಳ ಜಾಮೀನು ಸಾಲ ಹಾಗೂ ಜಾಮೀನಿನ ಮೇಲೆ ಕೊಡುವ ಕ್ಯಾಶ ಕ್ರೆಡಿಟ ಸಾಲ)

- ಉತ್ಪನ್ನದ ವಿವರಗಳನ್ನು ಈ ಕೆಳಗಿನಂತೆ ಪೂರೈಸಬೇಕು.
- ನೌಕರರಿದ್ದಲ್ಲಿ ಪಗಾರ ಪತ್ರ.
- ಅರ್ಜಿದಾರರು ಒಕ್ಕಲುತನ ಮಾಡುತ್ತಿ ದ್ದಲ್ಲಿ ವ್ಯವಸಾಯದಲ್ಲಿದ್ದ ಉತ್ಪನ್ನ ಮತ್ತು ಖರ್ಚುಗಳ ವಿವರ ಜಮೀನು ಉತಾರದೊಂದಿಗೆ.
- ಅರ್ಜಿದಾರರು ವ್ಯಾಪಾರಸ್ಥರಾಗಿದ್ದಲ್ಲಿ ವ್ಯವಹಾರ ದಲ್ಲಿಯ ಕನಿಷ್ಟ ಎರಡು ವರ್ಷಗಳ ವ್ಯಾಪಾರಿ ಖಾತೆ, ಲಾಭ ಹಾನಿ ಖಾತೆ ಹಾಗೂ ಅಥಾವೆ ಪತ್ರಿಕೆಗಳ ಪ್ರತಿಗಳು ಅದಲ್ಲದೇ ಅದರ ಎರಡು ವರ್ಷಗಳ ಕಮರ್ಶಿಯಲ್ ಟ್ಯಾಕ್ಸ್ ತುಂಬಿದ ಬಗ್ಗೆ ಹಾಗೂ ಆಯಕರ ತುಂಬಿದ ಬಗ್ಗೆ ಅಸೆಸ್‌ಮೆಂಟ್ ಕಾಪಿಗಳು, ಅರ್ಜಿದಾರರು ಪಾರ್ಟನರ್‌ಶಿಪ್ ಫರ್ಮ ಹೊಂದಿದಲ್ಲಿ ಸದರಿ ಸಾಲವು ತಮ್ಮ ವ್ಯಾಪಾರಕ್ಕೆ ಬೇಕಾಗಿದ್ದಲ್ಲಿ ಸದರಿ ಫರ್ಮ್‌ದ ಡೀಡ್ ಪ್ರತಿ. (ವ್ಯಾಪಾರಕ್ಕೆ ಸಾಲ ಪಡೆಯುತ್ತಿದ್ದಲ್ಲಿ)
- ಅರ್ಜಿದಾರರ ಎರಡು ವರ್ಷಗಳ ಬೇರೆ ಬೇರೆ ಉತ್ಪನ್ನಗಳ, ಖರ್ಚುಗಳ ವಿವರಗಳು.
- ಅರ್ಜಿದಾರರು ಹೊಂದಿದ ಸ್ಥಿರಾಸ್ತಿಗಳ ವಿವರ / ಸೈಟು / ಮನೆ / ಬಂಗಲೆ / ಅಂಗಡಿ / ಉದ್ದಿಮೆಗಳ ಸ್ಥಿರಾಸ್ತಿಗಳ ಉತಾರಗಳು.
- ಅರ್ಜಿದಾರರು ಸಹಕಾರಿಯ ಮುಖ್ಯ ಕಛೇರಿಯ ಹೊರಗಿನ ಊರಿನಲ್ಲಿ ವಾಸಿಸು ತ್ತಿದ್ದಲ್ಲಿ ಅದರ ಸ್ಥಿರಾಸ್ತಿಗಳ ಮೇಲೆ ಹೊಂದಿದ ಬೋಜಾ ಪತ್ರಗಳು.
- ಅರ್ಜಿದಾರರು ನೌಕರರಾದಲ್ಲಿ / ಪೆನ್ಶನ್ ದಾರರಾಗಿದ್ದಲ್ಲಿ ಪಗಾರ / ಪೆನ್ಶನ್‌ಗಳ ಲೇಟೆಸ್ಟ್ ವಿವರಗಳು.

ಅರ್ಜಿದಾರರ ಸಾಲ ತುಂಬುವ ಸಾಮರ್ಥ್ಯ ಉದ್ದೇಶಗಳು ಸರಿಯಾಗಿ ಇದ್ದಲ್ಲಿ ಸಾಲ ಮಂಜೂರು ಮಾಡುವುದು.

ಸಾಲ ಮಂಜೂರಿಯಾದ ನಂತರ ಪಡೆಯುವ ಕಾಗದಪತ್ರಗಳು :

1) ಸಾಲದ ಕರಾರು ಪತ್ರಗಳನ್ನು ಸಾಲಗಾರರು ಜಾಮೀನುದಾರರೊಂದಿಗೆ ಕರಾರು ಪತ್ರ.
2) ಡಿಮಾಂಡ ಪ್ರಾಮಿಸರಿ ನೋಟ್
3) ಸಹಕಾರಿಯ ಆದೇಶದ ಮೇರೆಗೆ ಸ್ಥಿರಾಸ್ತಿ ಮೇಲೆ ಬೋಜಾ ಎರಿಸಿ ಕಾಗದ ಹಾಜರುಪಡಿಸುವುದು.

3) ಸ್ಥಿರಾಸ್ಥಿ ಒತ್ತಿ ಸಾಲ: (Check list of Papers for Mortgage loan)

ಸದರಿ ಸಾಲಕ್ಕೆ ಈ ಕೆಳಗಿನ ಕಾಗದಪತ್ರಗಳನ್ನು ಸಹಕಾರಿಗೆ ಸಲ್ಲಿಸಬೇಕು

1) ಸಾಲಕ್ಕೆ ಭದ್ರತೆ ಕೊಡುವ ಸ್ಥಿರಾಸ್ಥಿಯ ಲೇಟೆಸ್ಟ ಖಾತೆ ಉತಾರ ಹಾಗೂ ಅದರ ಮೇಲೆ 14 ವರ್ಷಗಳ ಬಿನ್ ಬೋಜಾ ಸರ್ಟಿಫೀಕೇಟ್‌ಗಳು.
2) ಸಾಲಕ್ಕಾಗಿ ಭದ್ರತೆ ಕೊಡುವ ಆಸ್ತಿಯ ಮೂಲ ಖರೀದಿ ಪತ್ರ.
3) ಭದ್ರತೆ ಕೊಡುವ ಆಸ್ತಿಯು ಬಕ್ಷಿಸ/ಮೃತ್ಯುಪತ್ರ / ವಾಟನಿ ಮುಖಾಂತರ ಅರ್ಜಿದಾರರಿಗೆ ದೊರೆತಿದ್ದಲ್ಲಿ ಸದರಿ ಸಂಬಂಧಪಟ್ಟ ಮೂಲ ಕಾಗದಪತ್ರಗಳು, ಪೂರ್ತಿ ಕರ ತುಂಬಿದ ಪಾವತಿಗಳು ಹಾಗೂ ಟ್ಯಾಕ್ಸ್ ಉತಾರಗಳು.
4) ಒತ್ತಿ ಕೊಡುವ ಆಸ್ತಿಯು, ನಗರಾಭಿವೃದ್ಧಿ ಪ್ರಾಧಿಕಾರ, ಗೃಹ ನಿರ್ಮಾಣ ಸಂಘ ಇವರಿಂದ ಹಂಚಿಕೆಯಾಗಿದ್ದಲ್ಲಿ ಸದರಿ ಆಸ್ತಿಯ ಮೇಲೆ ಸಾಲ ಪಡೆಯಲು ಸಂಬಂಧಪಟ್ಟವರಿಂದ ಒಪ್ಪಿಗೆ ಪತ್ರ.
5) ಆಸ್ತಿಯು ಹೊಸದಾಗಿ ನಿರ್ಮಿತವಾಗಿ ದ್ದಲ್ಲಿ ಕಾರ್ಪೋರೇಶನ್ / ಪಂಚಾಯತಿ / ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಟ್ಟಡ ನಿರ್ಮಾಣದ ವೇಳೇಗೆ ಸಂಬಂಧಿ ಸಲ್ಪಟ್ಟ ಪ್ಲಾನ್ ಹಾಗೂ ಬ್ಲುಪ್ರಿಂಟ ಪರ್ಮಿಶನ್‌ಗಳು.

ಜಿ.ಎಸ್. ಟೋಪಣ್ಣವರ
ವಿಭಾಗೀಯ ಅಧಿಕಾರಿ, ಬೆಳಗಾವಿ

6) ಸಹಕಾರಿಯು ಸಮ್ಮತಿಸಲ್ಪಟ್ಟ ಇಂಜಿನಿಯರ್‌ನಿಂದ ಸದರಿ ಸ್ಥಿರಾಸ್ಥಿಯ ಮೌಲ್ಯಮಾಪನದ ವರದಿ.
7) ಅರ್ಜಿದಾರರು ಈ ಕೆಳಗಿನಂತೆ ಸಂಬಂಧ ಪಟ್ಟ ದಾಖಲೆಗಳನ್ನು ಕೊಡಬೇಕು.

- ಎರಡು ವರ್ಷಗಳ ವ್ಯಾಪಾರಿ ಖಾತೆ, ಲಾಭ ಹಾನಿ ಪತ್ರಿಕೆ ಹಾಗೂ ಅಥಾವ ಪತ್ರಿಕೆ.
- ಅರ್ಜಿದಾರರು ಪಾಲುದಾರಿಕೆ ಸಂಸ್ಥೆಯ ವ್ಯಾಪಾರಸ್ಥರಾಗಿದ್ದರೆ ಪಾಲುದಾರಿಕೆ ಸಂಸ್ಥೆಯ ಡೀಡ್‌ನ್ನು ಕೊಡಬೇಕು. (ಸಾಲವು ವ್ಯಾಪಾರಕ್ಕಾಗಿ ಬೇಕಾದಲ್ಲಿ)
- ಎರಡು ವರ್ಷಗಳ ಕರ್ನಾಟಕ ವ್ಯಾಪಾರಿ ತೆರಿಗೆ ಹಾಗೂ ಕೇಂದ್ರಿಯ ವ್ಯಾಪಾರಿ ತೆರಿಗೆ ಗಳ ಅಸೆಸಮೆಂಟ್ ಕಾಪಿಗಳನ್ನು ಕೊಡಬೇಕು. (ಸಾಲವು ವ್ಯಾಪಾರಕ್ಕಾಗಿ ಬೇಕಾದಲ್ಲಿ)
- ಪಗಾರ ಪತ್ರ ಅಥವಾ ಪೆನ್ಶನ್ ಪುಸ್ತಕ ಪ್ರತಿಯನ್ನು ಕೊಡಬೇಕು.
- ಎರಡು ವರ್ಷಗಳ ಆದಾಯ ತೆರಿಗೆಗಳ ಅಸೆಸ್‌ಮೆಂಟ್ ಆರ್ಡರಗಳು ಹಾಗೂ ಇತರ ಉತ್ಪನ್ನಗಳ ದೃಢೀಕರಣ ಪತ್ರಗಳು. ಇತರ ಉತ್ಪನ್ನ ಮಾಹಿತಿಗಳು

ಸದರಿ ನಿಯೋಜಿತ ಭದ್ರತೆ ಮೇಲೆ ಕಾಯ್ದೆ ಸಲಹೆಗಾರರ ಅಭಿಪ್ರಾಯ ಪಡೆಯುವುದು.

ಕಾನೂನು ತಜ್ಞರು ಆಸ್ತಿಗೆ ಸಂಬಂಧಪಟ್ಟ ಕಾಗದಗಳನ್ನು ಪರಿಶೀಲಿಸಿದ ನಂತರ ಅವರು ಈ ಕೆಳಗೆ ಬರೆದ ವಿಷಯಗಳ ಮೇಲೆ ತಮ್ಮ ಅಭಿಪ್ರಾಯಗಳನ್ನು ಸಲ್ಲಿಸಬೇಕು.

1) ಆಸ್ತಿಯು ಲೀಸ್ ಹೋಲ್ಡ್ ಇರುತ್ತದೆಯೋ ಇದ್ದರೆ ಅದರ ಕರಾರುಗಳು ಏನು? ಹಾಗೂ ಅದು ಋಣಭಾರ ತೀರಿಸಲಿಕ್ಕೆ ಅರ್ಹತೆ ಹೊಂದಿದೆಯೋ?
2) ಅರ್ಜಿದಾರರು ಯಾವ ಮೂಲಗಳಿಂದ ಆಸ್ತಿಗೆ ಮಾಲಿಕತ್ವ ಹೊಂದಿರುತ್ತಾರೆ?

ಮುಂದಿನ ಸಂಚಿಕೆಗೆ...

31-03-2012ಕ್ಕೆ ವಿವಿಧ ಸೌಹಾರ್ದ ಸಹಕಾರಿಗಳ ಲಾಭಾಂಶಗಳು

ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಚಿತ್ರದುರ್ಗ

ಮಾರ್ಚ್ 31, 2012 ಕ್ಕೆ 1.5 ಕೋಟಿ ಲಾಭ. ಚಿತ್ರದುರ್ಗದ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ, 31.03. 2012 ಕ್ಕೆ 2.12 ಕೋಟಿ ಲಾಭ ಗಳಿಸಿ ತೆರಿಗೆಗಳನ್ನು ಕಳೆದು ನಿವ್ವಳ 1.5 ಕೋಟಿ ಲಾಭ ಗಳಿಸಿದೆ. ಗ್ರಾಸ್ ಎನ್.ಪಿ.ಎ.5% ಇದ್ದು ನೆಟ್ ಎನ್.ಪಿ.ಎ.0% ಇದೆ ಠೇವಣಿಗಳು 43.58 ಕೋಟಿ, ಸಾಲಗಳು 41 ಕೋಟಿ ಹಾಗೂ ನಿಧಿಗಳು 19.5 ಕೋಟಿ ಎಂದು ಬ್ಯಾಂಕಿನ ಪ್ರಕಟಣೆ ತಿಳಿಸಿದೆ.–

ಶ್ರೀ ಪ್ರಭುಲಿಂಗೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿದ್ದಾಪುರ

ಶ್ರೀ ಪ್ರಭುಲಿಂಗೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಸಿದ್ದಾಪುರ, ಜಮಖಂಡಿ ತಾಲೂಕು, ಬಗಲಕೋಟೆ ಜಿಲ್ಲೆ 1.75 ಕೋಟಿ ಲಾಭ ಗಳಿಸಿದೆ.

ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ನಿ., ಸಂಕೇಶ್ವರ

ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ನಿಯಮಿತ, ಸಂಕೇಶ್ವರ, ಚಿಕ್ಕೋಡಿ ತಾಲೂಕು, ಬೆಳಗಾಂ ಜಿಲ್ಲೆ ಇವರು 45 ಲಕ್ಷ ರೂ.ಗಳ ಲಾಭ ಗಳಿಸಿರುವುದಾಗಿ ತಿಳಿಸಿದ್ದಾರೆ.

ಶ್ರೀ ಸರಸ್ವತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಪುತ್ತೂರು

ಶ್ರೀ ಸರಸ್ವತಿ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಪುತ್ತೂರು, ಇವರು 58 ಲಕ್ಷ ರೂ.ಗಳ ಲಾಭ ಬಂದಿದೆ ಹಾಗೂ 42.46 ಕೋಟಿ ರೂ.ಗಳ ಠೇವಣಿ, 35.27 ಸಾಲ, 43.75 ಕೋಟಿ ದುಡಿಯುವ ಬಂಡವಾಳ, 58 ಲಕ್ಷ ರೂ.ಗಳ ಶೇರು ಬಂಡವಾಳ ಹಾಗೂ 1000 ಸದಸ್ಯರು ಇರುವುದೆಂದು ತಿಳಿಸಿದ್ದಾರೆ.

ತುಮಕೂರು ಅರ್ಬನ್ ವಿವಿದ್ದೋದ್ದೇಶ ಸೌಹಾರ್ದ ಕೋ–ಆಪರೇಟಿವ್ ಲಿ, ನೂತನ ವಿಳಾಸದಲ್ಲಿ ಉಳಿತಾಯ ಖಾತೆ ಠೇವಣಿ ಸಂಗ್ರಹ ಕಾರ್ಯಕ್ರಮ.

ಶ್ರೀ ಭ್ರಮರಾಂಬ ಸೌಹಾರ್ದ ಪತ್ತಿನ ಸಹಕಾರಿ ನಿ., ಮಸ್ಕಿ

ಶ್ರೀ ಭ್ರಮರಾಂಬ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ, ಮಸ್ಕಿ, ಸೌಹಾರ್ದದಲ್ಲಿ 10,000 ಸದಸ್ಯರು, 42.45 ಕೋಟಿ ರೂ.ಗಳ ಠೇವಣಿ , 35.28 ಕೋಟಿ ರೂ.ಗಳ ಸಾಲ, 43.3 ಕೋಟಿ ದುಡಿಯುವ ಬಂಡವಾಳ, 8 ಶಾಖೆಗಳು ಇದ್ದು 84 ಲಕ್ಷ ರೂ.ಗಳ ಲಾಭ ಬಂದಿರುವುದಾಗಿ ತಿಳಿಸಿದ್ದಾರೆ.

ಸುಕೋ ಬ್ಯಾಂಕ್, ಬಳ್ಳಾರಿ

ಸುಕೋ ಬ್ಯಾಂಕ್, ಬಳ್ಳಾರಿ ಇವರು ಮಾರ್ಚ್ 31, 2012 ಕ್ಕೆ 1.36 ಕೋಟಿ ರೂ.ಗಳ ಲಾಭ ಗಳಿಸಿರುವುದಾಗಿ, 143 ಕೋಟಿ ರೂ.ಗಳ ಠೇವಣಿ ಹಾಗೂ 92 ಕೋಟಿ ರೂ.ಗಳ ಸಾಲ ನೀಡಿರುವುದಾಗಿ ಗ್ರಾಸ್ ಎನ್.ಪಿ.ಎ. 6.17 ಇದ್ದು ನೆಟ್ ಎನ್.ಪಿ.ಎ. 0.45 ಲಕ್ಷ ಇರುವುದಾಗಿ ತಿಳಿಸಿದೆ.

ವಿಕಾಸ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕ್, ಹೊಸಪೇಟೆ

ಬಳ್ಳಾರಿ ಜಿಲ್ಲೆಯ ಗಣಿ ಉದ್ಯಮದ ಮೇಲಾದ ಪ್ರತಿಕೂಲ ಪರಿಣಾಮದ ನಡುವೆಯೂ ಹೊಸಪೇಟೆಯ ವಿಕಾಸ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕ್ ವಿಕಾಸದತ್ತ ಮುನ್ನಡೆಯುತ್ತಿದೆ ಎಂದು ಬ್ಯಾಂಕ್ ಅಧ್ಯಕ್ಷ ಶ್ರೀ ವಿಶ್ವನಾಥ ಚ.ಹಿರೇಮಠ ಹೇಳಿದರು.

ಭಾನುವಾರ ಏಪ್ರಿಲ್ 1ರಂದು ಬ್ಯಾಂಕ್ ಸಭಾಂಗಣದಲ್ಲಿ 2011/12ನೇ ಸಾಲಿನ ವಾರ್ಷಿಕ ಅಂತ್ಯದ ಬ್ಯಾಂಕ್ ಪ್ರಗತಿಯ ಪಕ್ಷಿನೋಟವನ್ನು ಸುದ್ದಿಗಾರರೊಂದಿಗೆ ಹಂಚಿಕೊಂಡ ಅವರು ಬಳ್ಳಾರಿ ಜಿಲ್ಲೆ ಸೇರಿದಂತೆ ಗಣಿ ಪ್ರದೇಶಗಳಲ್ಲಿ ಗಣಿಗಾರಿಕೆ ನಿಷೇದದಿಂದ ಗಣಿ ಮಾತ್ರವಲ್ಲದೆ ಪೂರಕ ಎಲ್ಲಾ ಉದ್ಯಮಗಳಿಗೂ ಹಿನ್ನೆಡೆಯಾಗಿದ್ದು ಬ್ಯಾಂಕಿಂಗ್ ಕ್ಷೇತ್ರವು ಹೊರತಾಗಿರಲಿಲ್ಲ, ಇಂತಹ ಸಂದರ್ಭದಲ್ಲಿಯೂ ಬ್ಯಾಂಕ್ 1.40ಕೋಟಿ ಲಾಭಗಳಿಸಿರುವುದು ಹರ್ಷದಾಯಕ ವಿಷಯ ಎಂದರು. ಆರ್ಥಿಕ ಹಿನ್ನಡೆ ಬ್ಯಾಂಕ್‌ಗಳ ವಸೂಲಾತಿ ಕ್ರಮದಲ್ಲಿಯು ಹಿನ್ನಡೆಯಾಗುವಂತೆ ಮಾಡಿದೆಯಾದರೂ ನಮ್ಮ ಬ್ಯಾಂಕ್ 100 ಪ್ರತಿಶತ ವಸೂಲಾತಿ ಸಾಧಿಸುವ ಮೂಲಕ ನಿವ್ವಳ ಅನುತ್ಪಾದಕ ಆಸ್ತಿ 0 ಆಗಿರುವುದು ಬ್ಯಾಂಕ್ ಸದೃಡತೆಗೆ ಹಿಡಿದ ಕೈಗನ್ನಡಿಯಾಗಿದೆ ಎಂದರು.

ಪ್ರಸಕ್ತ ವರ್ಷ 3.07 ಕೋಟಿ ಶೇರು ಬಂಡವಾಳ, 70 ಕೋಟಿ ಠೇವಣಿಗಳು, 58.42 ಕೋಟಿ ಸಾಲಗಳನ್ನು ವಿತರಿಸಿದೆ ಎಂದರು. ನಿರ್ದೇಶಕರಾದ ಶ್ರೀ ಎ.ಸೀ.ನಂ.ಭಟ್, ಎಸ್.ವಿ.ನಾಯಕ್, ಅನಂತಜೋಶಿ, ಎಸ್.ಚಂದ್ರಹಾಸ ಎಂ.ವೆಂಕಪ್ಪ, ಛಾಯಾದಿವಾಕರ, ರಮೇಶ ಪುರೋಹಿತ್ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಇ.ಉಮಾದೇವಿ ಪತ್ರಿಕಾಗೋಷ್ಠಿಯಲ್ಲಿ ಇದ್ದರು. ■

ಸೌಹಾರ್ದ ಸಹಕಾರಿ ಸಿಬ್ಬಂದಿಗಳಿಗಾಗಿ

ನಿನಾಸಂನಲ್ಲಿ 7ನೇ ತಂಡದ "ಸಂಪೂರ್ಣ ವ್ಯಕ್ತಿತ್ವ ವಿಕಸನ" ತರಬೇತಿ

ಸೌಹಾರ್ದ ಸಹಕಾರಿಗಳ ಸಿಬ್ಬಂದಿ ಗಳಿಗಾಗಿ 7 ನೇ ತಂಡದ ವ್ಯಕ್ತಿತ್ವ ವಿಕಸನ 10 ದಿನಗಳ ತರಬೇತಿ ಕಾರ್ಯಕ್ರಮವನ್ನು ಸುಸಜ್ಜಿತ, ಆಧುನಿಕ ಸೌಲಭ್ಯಗಳಿರುವ ಹಾಗೂ ಉತ್ತಮ ಪರಿಸರದ ಸುಪ್ರಸಿದ್ಧ ಪ್ರವಾಸಿ ರಾಷ್ಟ್ರೀಯ ಜಾನಪದ ನಾಟಕ ಗ್ರಾಮ (ನಿನಾಸಂ) ನೀಲಕಂಠೇಶ್ವರ ನಾಟಕ ಸಂಘ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಹೆಗ್ಗೋಡುನಲ್ಲಿ 09–06–2012 ರಿಂದ 18–6–2012ವರೆಗೆ ಏರ್ಪಡಿಸಲಾಗಿದೆ. ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಇಂದೇ ನಿಮ್ಮ ಸೀಟನ್ನು ಕಾಯ್ದಿರಿಸಿ. ಲಭ್ಯ ವಿರುವ ಸೀಟುಗಳು ಕೇವಲ 40 ಮಾತ್ರ. ಮೊದಲು ಬಂದವರಿಗೆ ಮೊದಲ ಆದ್ಯತೆ. ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ. ಪ್ರವೇಶ ಶುಲ್ಕ ತಲಾ ರೂ. 5000/–ಗಳು. ವಿವರಗಳಿಗೆ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಿ.

ಪೂಜಾರಿ ಅಂಡ್ ಪೂಜಾರಿ ಚಾರ್ಟರ್ಡ್ ಅಕೌಟೆಂಟ್

ಸಂಯುಕ್ತ ಸಹಕಾರಿಯ ಪ್ಯಾನೆಲ್‌ನಿಂದ ವಜಾ

ಶ್ರೀ ಪೂಜಾರಿ ಅಂಡ್ ಪೂಜಾರಿ ಚಾರ್ಟರ್ಡ್ ಅಕೌಟೆಂಟ್ ಬೆಳಗಾವಿ ಇವರು ಸಲ್ಲಿಸಿದ ಲೆಕ್ಕಪರಿಶೋಧನಾ ವರದಿ 2011–12ರಲ್ಲಿ ವಸ್ತುನಿಷ್ಠವಾಗಿರುವುದಿಲ್ಲ ಎಂದು ಗಮನಿಸಲಾಗಿದೆ. ಸಹಕಾರಿಯ ಆಸ್ತಿ ಖರೀದಿಗೆ ಸಂಬಂದಿಸಿದಂತೆ ನಡೆದಿರುವ ಅವ್ಯವಹಾರವನ್ನು ವರದಿಯಲ್ಲಿ ನಮೂದಿಸಿರುವುದಿಲ್ಲ ಹಾಗೂ ವರದಿಯಲ್ಲಿ ಇನ್ನೂ ಹಲವಾರು ತಪ್ಪು ಮಾಹಿತಿಯನ್ನು ಒಳಗೊಂಡಿರುವುದರಿಂದ ಅವರನ್ನು ಸಂಯುಕ್ತ ಸಹಕಾರಿಯ ಲೆಕ್ಕ ಪರಿಶೋಧಕರ ಪಟ್ಟಿಯಿಂದ ಕೈಬಿಡಲಾಗಿದೆ.

ಪತ್ರಿಕೆಯ ಚಂದಾದರ ಪರಿಷ್ಕೃತ

ಸ್ವಾಭಿಮಾನಿ ಸಹಕಾರಿ ಪತ್ರಿಕೆ ಇತ್ತೀಚೆಗೆ ಬಹಳ ಅಂದವಾಗಿ ಬಹುಬಣ್ಣಗಳಲ್ಲಿ 16 ಪುಟಗಳಲ್ಲಿ ಮುದ್ರಣವಾಗಿ ತಮಗೆ ಬರುತ್ತಿದೆ. ಈ ಪತ್ರಿಕೆಯನ್ನು ಇನ್ನೂ ಹೆಚ್ಚು ಆಕರ್ಷಕವಾಗಿ ಇನ್ನೂ 4 ಪುಟಗಳನ್ನು ಹೆಚ್ಚಿಸಿ ಒಟ್ಟಿಗೆ 20 ಪುಟಗಳ ಪತ್ರಿಕೆಯನ್ನು ಇದೇ ಏಪ್ರಿಲ್ 2012 ರಿಂದ ಹೊರತರಲಾಗುತ್ತಿದೆ. ವಿನ್ಯಾಸ ಮುದ್ರಣಗಳ ವೆಚ್ಚದಲ್ಲಿ ಹೆಚ್ಚಳವಾಗುವುದರಿಂದ ಸ್ವಾಭಿಮಾನಿ ಸಹಕಾರಿಯ ವಾರ್ಷಿಕ ಚಂದಾದರವನ್ನು ರೂ. 100/– ಹಾಗೂ ಬಿಡಿಪತ್ರಿಕೆಯ ಚಂದಾವನ್ನು ರೂ. 12/– ಎಂದು ನಿಗದಿಮಾಡಲಾಗಿದೆ. ಓದುಗರು ಸಹಕರಿಸಲು ಕೋರಿದೆ.

– ಸಂಪಾದಕರು

ಸೌಹಾರ್ದ ಸಹಕಾರಿಗಳ ಗಮನಕ್ಕಾಗಿ :

1 ನೇ ಏಪ್ರಿಲ್ 2012 ರಿಂದ ಜಾರಿಗೆ ಬಂದಿರುವ ಮುದ್ರಾಂಕ ಶುಲ್ಕ

2012ರ ಆಯವ್ಯಯದಲ್ಲಿ ಮುದ್ರಾಂಕ ಶುಲ್ಕದ ಪಾವತಿಯನ್ನು ಅಡವು ಮತ್ತು ಗಿರವಿ ಮೇಲಿನ ಮುದ್ರಾಂಕ ಶುಲ್ಕವನ್ನು 0.1 ಪ್ರತಿಶತಕ್ಕೆ ಇಳಿಸಿರುವುದು ಏಪ್ರಿಲ್ 1 ರಿಂದ ಜಾರಿಗೆ ಬಂದಿದೆ. ಸೌಹಾರ್ದ ಸಹಕಾರಿಗಳು ಇದಕ್ಕೂ ಮೊದಲು ಅಡವು/ಗಿರವಿ ಸಾಲಗಳಿಗೆ 0.25% ಮುದ್ರಾಂಕ ಶುಲ್ಕ ಪಾವತಿಸಲಾಗುತ್ತಿತ್ತು ಮತ್ತು 3 ತಿಂಗಳಿಗಿಂತ ಹೆಚ್ಚಿನ ಅವಧಿಯ ಮರುಪಾವತಿ ಸಾಲಗಳಿಗೆ 0.50% ಮುದ್ರಾಂಕ ಶುಲ್ಕ ಪಾವತಿಸಲಾಗುತ್ತಿತ್ತು. ಪ್ರಸ್ತುತ ಆಯ–ವ್ಯಯದಂತೆ 01.04.2012 ರಿಂದ ಜಾರಿಗೆ ಬಂದಿರುವ ಮುದ್ರಾಂಕ ಶುಲ್ಕ ಎಲ್ಲ ಅವಧಿಯ ಮರುಪಾವತಿಗೆ 0.1% ಪಾವತಿಸಬೇಕೆಂದು ನಿಗಧಿಪಡಿಸಲಾಗಿದೆ.

ಸೌಹಾರ್ದ ಸಹಕಾರಿಗಳ ಗಮನಕ್ಕೆ

ಸಂಯುಕ್ತ ಸಹಕಾರಿಗೆ ವಾರ್ಷಿಕ ಶುಲ್ಕ ಪಾವತಿ ಪರಿಷ್ಕರಣೆ

ಸಂಯುಕ್ತ ಸಹಕಾರಿಯ ಉಪವಿಧಿಗಳ ತಿದ್ದುಪಡಿ ದಿನಾಂಕ : 3–12–2011ರಂದು ಸಹಕಾರಿ ನಿಬಂಧಕರ ಅನುಮೋದನೆ ಪಡೆದಿದೆ. ಸೌಹಾರ್ದ ಸಹಕಾರಿಗಳು ಇನ್ನು ಮುಂದೆ ಈ ಕೆಳಕಂಡ ಪ್ರಮಾಣದಂತೆ ವಾರ್ಷಿಕ ಶುಲ್ಕ ಪಾವತಿಸಬೇಕು.

ಸಂಖ್ಯೆ	ದುಡಿಯುವ ಬಂಡವಾಳ (ರೂ.ಗಳು)	ವಾರ್ಷಿಕ ಶುಲ್ಕ ರೂ.ಗಳಲ್ಲಿ
1.	5 ಲಕ್ಷಕ್ಕಿಂತ ಕಡಿಮೆ	250
2.	5 ಲಕ್ಷಕ್ಕಿಂತ ಹೆಚ್ಚು 10 ಲಕ್ಷಕ್ಕಿಂತ ಕಡಿಮೆ	500
3.	10 ಲಕ್ಷಕ್ಕಿಂತ ಹೆಚ್ಚು 30 ಲಕ್ಷಕ್ಕಿಂತ ಕಡಿಮೆ	1000
4.	30 ಲಕ್ಷಕ್ಕಿಂತ ಹೆಚ್ಚು 1 ಕೋಟಿಗಿಂತ ಕಡಿಮೆ	2000
5.	1 ಕೋಟಿಗಿಂತ ಹೆಚ್ಚು 3 ಕೋಟಿಗಿಂತ ಕಡಿಮೆ	4000
6.	3 ಕೋಟಿಗಿಂತ ಹೆಚ್ಚು 10 ಕೋಟಿಗಿಂತ ಕಡಿಮೆ	10000
7.	10 ಕೋಟಿಗಿಂತ ಹೆಚ್ಚು 30 ಕೋಟಿಗಿಂತ ಕಡಿಮೆ	30000
8.	30 ಕೋಟಿಗಿಂತ ಹೆಚ್ಚು 50 ಕೋಟಿಗಿಂತ ಕಡಿಮೆ	50000
9.	50 ಕೋಟಿಗಿಂತ ಹೆಚ್ಚು	75000

ಸ್ವಾಭಿಮಾನಿ ಸಹಕಾರಿ

ಲೆಕ್ಕಪರಿಶೋಧಕರ ಎಂಪ್ಯಾನಲ್‌ಮೆಂಟ್ ಹಾಗೂ ಪುನರ್‌ಮನನ ಕಾರ್ಯಾಗಾರ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಹಾಗೂ ದಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ, ಬೆಂಗಳೂರು ಶಾಖೆಯು ಜಂಟಿಯಾಗಿ ಲೆಕ್ಕಪರಿಶೋಧಕರ ತರಬೇತಿ ಹಾಗೂ ಪುನರ್‌ಮನನ ತರಬೇತಿ ಕಾರ್ಯಕ್ರಮವನ್ನು ದಿನಾಂಕ 30.03.2012 ರಂದು ಬೆಂಗಳೂರಿನ ಐ.ಸಿ.ಎ.ಐ. ಭವನದಲ್ಲಿ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ಕೆ.ಎಸ್.ನವೀನ್‌ರವರು ಉದ್ಘಾಟಿಸಿ ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆ ವ್ಯಕ್ತಿನಿಷ್ಠವಾಗಿರದೇ ವಸ್ತುನಿಷ್ಠವಾಗಿರಬೇಕು ಎಂದು ಹೇಳಿದರು. ಮುಂದುವರೆದು ಮಾತನಾಡಿ ರಾಜ್ಯದಲ್ಲಿ 900ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ಲಾಭದಲ್ಲಿದ್ದು 400ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ನಷ್ಟದಲ್ಲಿವೆ. ಸಂಯುಕ್ತ ಸಹಕಾರಿಯ ವತಿಯಿಂದ ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಿ ಎಲ್ಲರೂ ಉತ್ತಮವಾಗಿ ಕಾರ್ಯನಿರ್ವಹಿಸುವಂತೆ ವ್ಯವಸ್ಥೆ ಮಾಡಲಾಗುತ್ತಿದೆ. ಇದು ಶ್ಲಾಘನೀಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಸತೀಶ್ಚಂದ್ರರವರು ಮಾತನಾಡಿ ದೇಶದ ಹಣಕಾಸು ವ್ಯವಸ್ಥೆಯನ್ನು ಸುಭದ್ರವಾಗಿ ಇರುವಂತೆ ಈ ನಮ್ಮ ಲೆಕ್ಕಪರಿಶೋಧಕ ವರ್ಗದವರು ಕಾರ್ಯನಿರ್ವಹಿಸುತ್ತಿದ್ದಾರೆ ಇವರಿಂದಲೇ ನಮ್ಮ ಆರ್ಥಿಕ ಸ್ಥಿತಿ ಬೇರೆಲ್ಲ ದೇಶಗಳಿಗಿಂತ ಉತ್ತಮವಾಗಿದೆ ಎಂದು ತಿಳಿಸಿ ಲೆಕ್ಕಪರಿಶೋಧಕರು ಸಹಕಾರಿ ಕ್ಷೇತ್ರದ ಆಶಯವನ್ನು ರಕ್ಷಿಸುವ ಕಾರ್ಯ ನಿರ್ವಹಿಸಬೇಕಾಗುತ್ತದೆ. ವಿಶೇಷವಾಗಿ ಸಹಕಾರಿಗಳು ಶಾಖೆಗಳನ್ನು ತೆರೆಯುವ, ಸಿಬ್ಬಂದಿಗಳ ನೇಮಕ ಮಾಡುವ, ಹೂಡಿಕೆ ಮಾಡುವ ಹಾಗೂ ಸಾಲ ನೀಡಿರುವ ವಿಷಯಗಳ ಬಗ್ಗೆ ತುಂಬ ಎಚ್ಚರದಿಂದ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಐ.ಸಿ.ಎ.ಐ. ಬೆಂಗಳೂರು ಶಾಖೆಯ ಅಧ್ಯಕ್ಷರಾದ ಶ್ರೀನಿತಿನ್ ಮಹದೇವ್ ಮಾತನಾಡಿ ಭಾರತ ದೇಶ ಇಡೀ ಪ್ರಪಂಚದಲ್ಲೇ ಅತಿ ಹೆಚ್ಚಿನ ಲೆಕ್ಕಪರಿಶೋಧಕರುಗಳನ್ನು ಹೊಂದಿದ ದೇಶವಾಗಿದೆ. ನಮ್ಮ ದೇಶದಲ್ಲಿ 1,85,000 ಲೆಕ್ಕಪರಿಶೋಧಕರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಲೆಕ್ಕಪರಿಶೋಧಕರು ಸಂಸ್ಥೆಯ ಹಾಗೂ ದೇಶದ ಹಣಕಾಸಿನ ವ್ಯವಸ್ಥೆಯನ್ನು ಹದಗೆಡದಿರುವ ಹಾಗೆ ನೋಡಿಕೊಳ್ಳುವ ಜವಾಬ್ದಾರಿ ಹೊಂದಿದ್ದಾರೆ ಎಂದು ತಿಳಿಸಿ, ಈ ಸಂಸ್ಥೆಯ ಸಹಯೋಗದೊಂದಿಗೆ ಈ ತರಬೇತಿ ಹಾಗೂ ಪುನರ್‌ಮನನ ಕಾರ್ಯಕ್ರಮವನ್ನು ಏರ್ಪಡಿಸಿರುವುದು ಸ್ವಾಗತಾರ್ಹ ಎಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಜಂಟಿ ನಿಬಂಧಕರಾದ ಶ್ರೀ ಅರುಣ್ ಕುಮಾರ್‌ರವರು ಇತ್ತೀಚೆಗೆ ಬಂದ ಸಂವಿಧಾನದ 111ನೇ ತಿದ್ದುಪಡಿಯನ್ವಯ ಸಮಗ್ರ ಸಹಕಾರಿ ಕ್ಷೇತ್ರ ಈ ಲೆಕ್ಕಪರಿಶೋಧಕರ ವ್ಯಾಪ್ತಿಗೆ ಒಳಪಡುವ ಸಾಧ್ಯತೆ ಇದೆ. ಇದಕ್ಕಾಗಿ ಲೆಕ್ಕಪರಿಶೋಧಕರು ಸಿದ್ಧರಾಗಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ.ಪಾಟೀಲ್‌ರವರು ಪ್ರಾಸ್ತಾವಿಕ ಭಾಷಣ ಮಾಡಿದರು. ಐ.ಸಿ.ಎ.ಐ. ಕಾರ್ಯ ದರ್ಶಿಯಾದ ಶ್ರೀ ಪ್ರಸಾದ್‌ರವರು ವಂದನಾರ್ಪಣೆ ಮಾಡಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಬಿ.ವಿ. ರವೀಂದ್ರನಾಥ್ ಮತ್ತು ಶ್ರೀ ಮಧುಕರ್ ಹೆಗಡೆರವರು ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ 56 ಜನ ಹೊಸ ದಾಗಿ ಎಂಪ್ಯಾನಲ್‌ಮೆಂಟ್‌ಗೆ ಸೇರಿದರು, 13 ಜನ ಪುನರ್‌ಮನನ ಕಾರ್ಯಕ್ರಮಕ್ಕೆ ಭಾಗವಹಿಸಿದಂತೆ ಒಟ್ಟು 69 ಲೆಕ್ಕಪರಿ ಶೋಧಕರು ಭಾಗವಹಿಸಿದರು.

ಸಂಯುಕ್ತ ಸಹಕಾರಿಗೆ ಕೊಪ್ಪಳದ ಸೌಹಾರ್ದ ಸಹಕಾರಿಗಳ ಭೇಟಿ

ಕೊಪ್ಪಳ ಜಿಲ್ಲೆಯ ಈಶ್ವರ ಸೌಹಾರ್ದ ಮಹಿಳಾ ಸಹಕಾರಿ ಕೊಪ್ಪಳ, ಸಾಧನ ಸೌಹಾರ್ದ ಮಹಿಳಾ ಸಹಕಾರಿ ಕಿನಾಳ, ಗವಿಸಿದ್ದೇಶ್ವರ ಮಹಿಳಾ ಸೌಹಾರ್ದ ಸಹಕಾರಿ ಕೂಳೂರು, ಭೂಮಿಕ ಮಹಿಳಾ ಸೌಹಾರ್ದ ಸಹಕಾರಿ ಅಳವಂಡಿ, ಸಂಗಮ ಮಹಿಳಾ ಸೌಹಾರ್ದ ಸಹಕಾರಿ ಹಲಗೇರಿ, ಗಳಿಂದ ಅಧ್ಯಕ್ಷರು,ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸಂಪರ್ಕ ಸಂಸ್ಥೆಯ ನೇತೃತ್ವದಲ್ಲಿ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳನ್ನು ಅಧ್ಯಯನ ಮಾಡುವುದಕ್ಕಾಗಿ ಭೇಟಿ ಮಾಡಿದ್ದರು. ಭೇಟಿ ಸಮಯದಲ್ಲಿ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್,ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ ಕುಮಾರ, ಕಾನೂನು ವಿಭಾಗದ ಅಧಿಕಾರಿ ಶ್ರೀ ಶ್ರೀಕಾಂತ ಮತ್ತು ತರಬೇತಿ ಅಧಿಕಾರಿ ಶ್ರೀ ವಿ.ಜೆ.ಕಾರಕೂನರವರು ಉಪಸ್ಥಿತರಿದ್ದು ವಿವರಗಳನ್ನು ನೀಡಿದರು.